ನವಸಾಕ್ಷರ ಪುಸ್ತಕ ಮಾಲೆ ೮೦

ಸಣ್ಣಾಟ

ಡಾ|| ಶ್ರೀರಾಮ ಇಟ್ಟಣ್ಣವರ



ಕನ್ನಡ ವಿಶ್ವವಿದ್ಯಾಲಯ
ಮಾತೆಂಬುದು ಜ್ಯೋತಿರ್ಲಿಂಗ

ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ-೯೦

ಸಣ್ಣಾಟ

ಡಾ॥ ಶ್ರೀರಾಮ ಇಟ್ಟಣ್ಣವರ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

SANNATA : By Dr. SRIRAMA ITTANNAVARA. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಡಾ|| ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ ೮.೦೦

ಮುದ್ರಕರು
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
೩/೩, ಮೊದಲನೆ ಮುಖ್ಯರಸ್ತೆ,
ಹೊಸ ತರಗುಪೇಟೆ,
ಬೆಂಗಳೂರು ೫೬೦ ೦೦೨

ಸಣ್ಣಾಟ

ಗ್ರಾಮೀಣರು - ಮನರಂಜನೆ

ನಮ್ಮದು ಹಳ್ಳಿಗಳ ದೇಶ. ನಮ್ಮ ಹಳ್ಳಿಗರು ಒಕ್ಕಲುತನವನ್ನು ಮುಖ್ಯ ಕೆಲಸವನ್ನಾಗಿ ಮಾಡಿಕೊಂಡವರು. ಇಷ್ಟೇ ಕಷ್ಟದ ಬೇರೆ ಕೆಲಸಗಳೂ ಇವರಿಗುಂಟು. ಹೀಗಾಗಿ ತುಂಬ ಸಾಹಸದಿಂದ ಬದುಕು ಸಾಗಿಸುವುದು ಇವರಿಗೆ ತಪ್ಪಿದ್ದಲ್ಲ. ಇಂತಹ ಕೆಲಸಗಳ ನಡುವೆಯೂ ನಮ್ಮ ಜನರು ಅನೇಕ ಕಲೆಗಳಿಗೆ ಜನ್ಮವಿತ್ತುದು ಕುತೂಹಲದ ಸಂಗತಿಯಾಗಿದೆ. ಭಾರತದುದ್ದಕ್ಕೂ ಹಳ್ಳಿಗರಿಂದ ಹುಟ್ಟಿದ ನಾನಾ ಬಗೆಯ ಜನಪದ ಸಾಹಿತ್ಯ-ಕಲೆಗಳನ್ನು ನಾವು ಕಾಣುತ್ತೇವೆ. ಉಪಜೀವನಕ್ಕಾಗಿ, ದುಡಿಮೆಯ ಬೇಸರ ನೀಗುವುದಕ್ಕಾಗಿ, ಸಂಪ್ರದಾಯಗಳಿಗಾಗಿ, ಮನರಂಜನೆಗಾಗಿ ವೈವಿಧ್ಯಮಯವಾದ ಹಾಡು, ಕಥೆ, ಕಲೆಗಳು ಇವರಿಂದ ಉಕ್ಕಿ ಹರಿಯುತ್ತವೆ. ಒಂದು ವಿಶೇಷತೆ ಎಂದರೆ, ಬಹಳಷ್ಟು ಜನ ನಿರಕ್ಷರಿಗಳೇ ಜನಪದ ಸಾಹಿತ್ಯ-ಕಲೆಗಳನ್ನು ಸೃಷ್ಟಿಸಿದ್ದಾರೆ, ಮುನ್ನಡೆಸಿಕೊಂಡು ಬಂದಿದ್ದಾರೆ. ಅನೇಕ ತಲೆಮಾರುಗಳಿಂದ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಇವು ಹರಿಯುತ್ತಾ ಬಂದಿವೆ. ಕಲೆಯೇ ಕೆಲವರಿಗೆ ದುಡಿಮೆಯಾಗಿದ್ದರೆ ಇನ್ನು ಕೆಲವರು ದುಡಿಮೆಯ ನಡುವೆ ಕಲೆಯನ್ನು ಸೃಷ್ಟಿಸಿದ್ದಾರೆ. ಗೊಂದಲಿಗರ ಹಾಡು ಕೆಲವರಿಗೆ ಜೀವನಾಧಾರವಾಗಿದ್ದರೆ ಹಂತಿ ಹಾಡು, ಬೀಸುಕಲ್ಲಿನ ಹಾಡು, ಮಟ್ಟಿಹಾಡು ಮುಂತಾದವು ದುಡಿಮೆಯ ಮಧ್ಯದಲ್ಲಿಯೇ ಹುಟ್ಟಿಕೊಂಡವುಗಳು. ಮದುವೆಯ ಹಾಡು, ಸೋಬಾನದ ಹಾಡು ಮುಂತಾದವುಗಳು ನಾವು ಬದುಕಿನಲ್ಲಿ ಅಳವಡಿಸಿಕೊಂಡ

ಸಂಪ್ರದಾಯಗಳಿಗನುಗುಣವಾಗಿ ಬಂದವುಗಳು. ವಿರಾಮ ಕಾಲದಲ್ಲಿ ಸೃಷ್ಟಿಗೊಂಡ ಹಾಡು-ಕುಣಿತಗಳಿಗೆ ಕೋಲಾಟ, ಹೆಜ್ಜೆಕುಣಿತಗಳನ್ನು ಹೆಸರಿಸಬಹುದು. ಹಳ್ಳಿಗರ ವಿರಾಮ ಕಾಲದ ಮನರಂಜನೆಯ ಬಹುದೊಡ್ಡ ಮಾಧ್ಯಮಗಳು ಗೀ ಗೀ ಮತ್ತು ಬಯಲಾಟಗಳು.


ಇಂದು ಮನರಂಜನೆಯ ಮಾಧ್ಯಮಗಳೆನಿಸಿದ ರೇಡಿಯೋ, ಟೇಪ್ ರೆಕಾರ್ಡರ, ಟಿ.ವಿ., ಸಿನೆಮಾ ಮುಂತಾದವುಗಳು, ಐವತ್ತು ಅಥವಾ ನೂರು ವರ್ಷಗಳ ಹಿಂದೆ ಹಳ್ಳಿಗಳಲ್ಲಿ ಪ್ರಚಾರದಲ್ಲಿರಲಿಲ್ಲ. ಹಳ್ಳಿಗರು ಮನರಂಜನೆಗೆ ತಮ್ಮನ್ನು ತಾವೇ ಅವಲಂಬಿಸುವ ಕಾಲವೊಂದಿತ್ತು. ಉತ್ತರ ಕರ್ನಾಟಕದಲ್ಲಿ ದೊಡ್ಡಾಟ-ಸಣ್ಣಾಟ ಶ್ರೀಕೃಷ್ಣಪಾರಿಜಾತ ಮುಂತಾದವುಗಳೇ ಹಳ್ಳಿಗರಿಗೆ ಮನರಂಜನೆ ನೀಡುವ ಬಹು ದೊಡ್ಡ ಮಾಧ್ಯಮಗಳಾಗಿದ್ದವು. ತಮ್ಮದೋ, ಮಗ್ಗಲು ಹಳ್ಳಿಯೋ ಎಲ್ಲೆಂದರಲ್ಲಿಗೆ ಜನರು ಕಾಲ್ನಡಿಗೆಯಿಂದ ಅಥವಾ ಗಾಡಿ ಕಟ್ಟಿಕೊಂಡು ಹೋಗಿ ಬಯಲಾಟಗಳನ್ನು ಕಂಡು ಸಂತೋಷಪಡುತ್ತಿದ್ದರು. ತಮ್ಮ ದುಡಿಮೆಯ ಆಯಾಸವನ್ನು ಮರೆಯುತ್ತಿದ್ದರು. ತಾವು ಸಹಾ ಇಂಥ ಹಾಡು ಹಾಡಬೇಕು, ಬಣ್ಣ ಬಳಿಯಬೇಕು, ಬಯಲಾಟ ಕಟ್ಟಬೇಕು ಎನಿಸುತ್ತಿತ್ತು. ಹಾಡು, ಕುಣಿತ, ಅಭಿನಯ, ವೇಷಗಾರಿಕೆ, ಬಣ್ಣಗಾರಿಕೆ - ಹೀಗೆ ಹಲವಾರು ಕಲೆಗಳು ಬಯಲಾಟದಲ್ಲಿ ಇರುತ್ತವೆ. ಹಳ್ಳಿಗರು ಬಯಲಾಟದಲ್ಲಿ ಸುಖ ಕಾಣುತ್ತಾರೆ.

ಸಣ್ಣಾಟ ಒಂದು ಪ್ರಕಾರವಾಗಿ

ಯಕ್ಷಗಾನ, ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣಪಾರಿಜಾತಗಳು ಕರ್ನಾಟಕದ ಬಯಲಾಟಗಳು. ತೊಗಲು ಗೊಂಬೆಯಾಟ, ಸೂತ್ರದ ಗೊಂಬೆಯಾಟಗಳೂ ಕರ್ನಾಟಕದಲ್ಲಿ ಇವೆ. ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣಪಾರಿಜಾತಗಳು ಉತ್ತರ ಕರ್ನಾಟಕದ ಕೊಡುಗೆಗಳು. ಸಣ್ಣಾಟಗಳು ಬೆಳಗಾವಿ, ಬಿಜಾಪುರ ಜಿಲ್ಲೆಗಳವು.

ಸಣ್ಣಾಟವೆಂಬುದು ಒಂದೇ ಆಟವಲ್ಲ; ಹಲವಾರು ಆಟಗಳು ಸೇರಿ ಆದ ಒಂದು ಪ್ರಕಾರ. ಮೊದಲಿನಿಂದಲೂ ಸಣ್ಣಾಟಕ್ಕೆ 'ದಪ್ಪಿನಾಟ'ವೆಂದು ಕರೆಯುವುದು ರೂಢಿಯಾಗಿದೆ. "ದಪ್ಪು" ಸಣ್ಣಾಟದಲ್ಲಿ ಪ್ರಮುಖವಾಗಿ ಬಳಸಲಾಗುವ ವಾದ್ಯ. ಆದ್ದರಿಂದ ಇದನ್ನು

ದಪ್ಪಿನಾಟವೆಂದು ಕರೆಯುವುದು ವಾಡಿಕೆ. ಕೆಲ ವಿದ್ವಾಂಸರು ಶ್ರೀಕೃಷ್ಣಪಾರಿಜಾತವನ್ನು ಸಣ್ಣಾಟವೆಂದು ತಪ್ಪು ಭಾವಿಸಿದರು. ಆದರೆ, ಶ್ರೀಕೃಷ್ಣಪಾರಿಜಾತ ಒಂದು ಸ್ವತಂತ್ರ ಬಯಲಾಟ ಪ್ರಕಾರ. ಮಾತಿನ ಶೈಲಿ, ಹಾಡಿನ ರೀತಿ ಮುಂತಾದ ವಿಷಯಗಳಲ್ಲಿ ಸಣ್ಣಾಟಕ್ಕೂ, ಶ್ರೀಕೃಷ್ಣಪಾರಿಜಾತಕ್ಕೂ ಅಂತರವಿದೆ. ಸರಳವಾದ ವೇಷಭೂಷಣ, ರಂಗಸಜ್ಜಿಕೆಗಳನ್ನು ಪಡೆದು ಕೊಂಡಿರುವ ಸಣ್ಣಾಟಕ್ಕೆ ದೊಡ್ಡಾಟದ ಅಬ್ಬರವಿಲ್ಲ. ಭೀಮಾರ್ಜುನ ಕಾಳಗ, ಕರ್ಣಾರ್ಜುನ ಕಾಳಗ, ಲವ-ಕುಶ ಕಾಳಗ, ಬಬ್ರುವಾಹನ, ಕೃಷ್ಣಾರ್ಜುನ ಯುದ್ಧ ಮುಂತಾದ ವಿರೋಚಿತ ಕಥಾನಕಗಳೇ ದೊಡ್ಡಾಟದಲ್ಲಿ ಬರುತ್ತವೆ. ಸಹಜವಾದ ಒಂದು ಘಟನೆ ಅಥವಾ ಒಬ್ಬರ ಚರಿತ್ರೆ ಸರಳ ರೀತಿಯಲ್ಲಿ ಸಣ್ಣಾಟದಲ್ಲಿ ಬರುತ್ತದೆ. ದೊಡ್ಡಾಟದ ರಭಸವನ್ನು ಕಳೆದುಕೊಂಡು ಸೌಮ್ಯವಾಗಿ ನಿಂತಿರುವಲ್ಲಿ ಮಾತ್ರ ಇದನ್ನು ಸಣ್ಣಾಟವೆಂದು ಕರೆಯಬಹುದು. ಆದರೆ, ಗುಣದ ದೃಷ್ಟಿಯಿಂದ ಇದು ಸಣ್ಣದು ಎಂದು ಭಾವಿಸಬಾರದು. ಕಣ್ಣಿಗೆ ಥಾಳವಾಗಿ ತೋರುವ ದೊಡ್ಡದೊಡ್ಡ ಕಿರೀಟಗಳು, ಹೊಳೆಯುವ ಪೀತಾಂಬರಗಳು, ಗದೆ, ಕತ್ತಿ, ಥಾಲು ಮುಂತಾದ ಯುದ್ಧೋಪಕರಣಗಳು ಸಣ್ಣಾಟದಲ್ಲಿ ಕಾಣಬರುವುದಿಲ್ಲ. ಆದರೆ, ಸಾಮಾಜಿಕ ಜೀವನದ



ಸಣ್ಣಾಟದ ಒಂದು ಮುಖ್ಯ ವಾದ್ಯ ''ದಪ್ಪು''

ಧರ್ಮ-ಭಕ್ತಿ-ನೀತಿಗಳ ಕಲ್ಪನೆಯನ್ನು ಸಣ್ಣಾಟಗಳು ಸರಳವಾಗಿ ಮೂಡಿಸುತ್ತವೆ. ಮನರಂಜನೆಯ ಮೂಲಕ ಸಮಾಜಕ್ಕೆ ಒದಗಿಸಿಕೊಡುವ ನೀತಿಬೋಧೆ ಸಣ್ಣಾಟಗಳ ವಿಶೇಷತೆ.

ಪುರಾಣದ ಕಥೆಗಳನ್ನು ಸಣ್ಣಾಟಕ್ಕೆ ಅಳವಡಿಸಿ ಕಥಾನಕಗಳನ್ನು ಹೆಣೆದಿರುವುದಿದೆ. ನಮ್ಮ ಗ್ರಾಮೀಣ ಜನ ಓದು-ಬರಹವನ್ನೇ ಬಲ್ಲವರಾಗಿರಲಿಲ್ಲ. ರಾಮಾಯಣ, ಮಹಾಭಾರತ, ಭಾಗವತ ಮುಂತಾದವುಗಳಲ್ಲಿನ ಪುರಾಣ ವಿಷಯಗಳನ್ನು ಜನಪದ-ಪುರಾಣ-ಕೀರ್ತನೆಗಳಿಂದ ಅರಿತುಕೊಂಡರು. ಅದರಿಂದ ಪ್ರಭಾವಿತರಾಗಿ ಅವುಗಳನ್ನು ಸಣ್ಣಾಟಕ್ಕೆ ಜೋಡಿಸಿಕೊಳ್ಳಲು ಹವಣಿಸಿ ಯಶಸ್ಸು ಸಾಧಿಸಿದ್ದಾರೆ. ನಿರಕ್ಷರಿಗಳಾದ ಇವರು ಇಂಥ ವಿಷಯಗಳನ್ನು ಜೋಡಿಸಿಕೊಳ್ಳುವಲ್ಲಿ ತಮ್ಮದೇ ಆದ ಕಲಾವಂತಿಕೆಯನ್ನು ಬೆರೆಸುತ್ತಿದ್ದರು. ಪೌರಾಣಿಕ ವಿಷಯವನ್ನು ಎತ್ತಿಕೊಂಡ ಮೇಲೆ ಇದು ನಿಜಜೀವನದಲ್ಲಿ ಹೀಗೇ ಇರುತ್ತದೆಯೇ ಎಂಬ ಬಗ್ಗೆ ಇವರು ಕೈಹಾಕಿದವರಲ್ಲ. ಆದ್ದರಿಂದಲೇ ತಾವೂ ಅನೇಕ ಕಾಲ್ಪನಿಕ ಸನ್ನಿವೇಶಗಳನ್ನು ಜೋಡಿಸಿಕೊಂಡು ಮಾತುಗಳನ್ನು ಹೆಣೆಯುವುದು ಇವರಿಗೆ ಸಾಧ್ಯವಾಯಿತು. ಆದರೂ, ಪೌರಾಣಿಕ ವಿಷಯಗಳು ದೊಡ್ಡಾಟಕ್ಕೆ ಹೊಂದಿಕೊಳ್ಳುವಂತೆ ಸಣ್ಣಾಟಕ್ಕೆ ಅಷ್ಟಾಗಿ ಹೊಂದಿಕೊಳ್ಳುವುದಿಲ್ಲ. ಶಿಬಿ ಚಕ್ರವರ್ತಿ, ಕುಂಭಕರ್ಣ, ಸಂಪೂರ್ಣ ಮಹಾಭಾರತ, ಐರಾವಣ-ಮೈರಾವಣ, ಇಂದ್ರಕೀಲ ಮುಂತಾದ ಸಣ್ಣಾಟಗಳನ್ನು ಈ ಸಂಬಂಧದಲ್ಲಿ ನೆನೆಯಬಹುದು.

ಪೌರಾಣಿಕ ವಿಷಯಗಳು ಮಾತ್ರವೇ ದೊಡ್ಡಾಟದ ವಸ್ತು. ಈ ಏಕತಾನತೆಯಿಂದ ಬಿಡಿಸಿಕೊಂಡು ಸಣ್ಣಾಟಗಳು ಚಾರಿತ್ರಿಕ ವಿಶೇಷಗಳತ್ತ ಒಲಿದಿರುವುದು ಒಂದು ವಿಶೇಷ. ವಿಷಯ ಚರಿತ್ರೆಗೆ ಸಮೀಪವಾಗಿರಬೇಕು, ನಿಜವೆನಿಸಬೇಕು ಎಂಬುದಕ್ಕಾಗಿ ಸಣ್ಣಾಟದ ಕೃತಿಕಾರ ಊರೂರು ಅಲೆಯುತ್ತಾನೆ. ಎಲ್ಲೆಲ್ಲಿಂದಲೋ ವಿಷಯವನ್ನು ಸಂಗ್ರಹಿಸುತ್ತಾನೆ. ಚಾರಿತ್ರಿಕ ಸಣ್ಣಾಟಗಳಲ್ಲಿ ಭಕ್ತಿಪ್ರಧಾನ ಸಣ್ಣಾಟಗಳು ಮತ್ತು ಶುದ್ಧ ಐತಿಹಾಸಿಕ ಸಣ್ಣಾಟಗಳು ಎಂದು ಎರಡೂ ಬಗೆ. ಭಕ್ತಿ ಪ್ರಧಾನವಾದ ಆಟಗಳಲ್ಲಿ ಕಥಾನಕ ದೃಷ್ಟಿಯಿಂದ ನಿಶ್ಚಿತ ನಡೆ-ಚೌಕಟ್ಟಿರುವುದರಿಂದ ಕೃತಿಕಾರನಿಗೆ ತನ್ನ ಸ್ವಂತಿಕೆಯನ್ನು ಮೆರೆಯಲು ಹೆಚ್ಚು ಅವಕಾಶವಿರುವುದಿಲ್ಲ. ಐತಿಹಾಸಿಕ ಆಟಗಳಲ್ಲಿ ಹೊಸ ಸನ್ನಿವೇಶಗಳನ್ನು ಸೃಷ್ಟಿಸಬಹುದು, ಇವುಗಳನ್ನು ಹಿಂದೆ ಮುಂದೆ ಮಾಡಬಹುದು, ಪಾತ್ರಗಳ ಸ್ವಭಾವದಲ್ಲಿ ಏರಿಳಿತಗಳನ್ನು ನಿರ್ಮಿಸಬಹುದು. ಹೀಗೆ ಕೃತಿಕಾರನಿಗೆ ಸ್ವಂತ ಪರಿಣತಿಯನ್ನು ತೋರಿಸಲು ಹೆಚ್ಚು ಅವಕಾಶವಿರುತ್ತದೆ. ಭಕ್ತರ ಆಟಗಳಿಗೆ ತಿರುನೀಲಕಂಠ ಒಳ್ಳೆಯ ಉದಾಹರಣೆಯಾದರೆ, ಐತಿಹಾಸಿಕ ಆಟಗಳಿಗೆ ಸಂಗೊಳ್ಳಿ ರಾಯಣ್ಣ ಉತ್ತಮ

ಉದಾಹರಣೆಯೆನಿಸುತ್ತದೆ. ತಿರುನೀಲಕಂಠ ಭಕ್ತಿಯ ಮೇಲ್ಮೆಯನ್ನು ಮೆರೆದ ಶಿವಶರಣನಾದರೆ, ಸಂಗೊಳ್ಳಿ ರಾಯಣ್ಣ ಬ್ರಿಟಿಷರ ವಿರುದ್ಧ ಹೋರಾಡಿ ನಾಡಿನ ಮನ್ನಣೆ ಪಡೆದವನು.

ಸಾಮಾಜಿಕ ಬಯಲಾಟಗಳು ಸಣ್ಣಾಟದ ಒಂದು ಸಾಧನೆಯೆಂದೇ ಹೇಳಬೇಕು. ತಮ್ಮ ಸುತ್ತಮುತ್ತಲೂ ನಡೆಯುವ ಸಂಗತಿಗಳನ್ನೇ ಜಾನಪದ ಕಲಾವಿದರು ಆರಿಸಿಕೊಂಡು ತಮ್ಮ ಆಟಗಳಿಗೆ ಹೊಂದಿಸಿ ಅನೇಕ ಸಣ್ಣಾಟಗಳನ್ನು ಕಟ್ಟಿದ್ದಾರೆ. ದೊಡ್ಡಾಟ ಪೌರಾಣಿಕ ವಿಷಯಗಳನ್ನಿಟ್ಟುಕೊಂಡು ತನ್ನ ವೈಭವಯುತ ರಂಗ ಸಜ್ಜಿಕೆ, ಎದ್ದುತೋರುವ ವೇಷ ಭೂಷಣಗಳಿಂದ ಜನರನ್ನು ಸೆಳೆಯುತ್ತದೆ. ಸಣ್ಣಾಟ ಸಾಮಾನ್ಯರಿಗೆ ಸಮೀಪವೆನಿಸುವ ವಸ್ತುವನ್ನಾಯ್ದುಕೊಂಡು ವಾಸ್ತವ ರೀತಿಯಲ್ಲಿ ನಿರೂಪಿಸುತ್ತದೆ. ಇದು ಈ ಕಲಾವಿದರ ಧೈರ್ಯ ಮತ್ತು ವಿಶೇಷವನ್ನು ಸಾಧಿಸಬೇಕೆಂಬ ಅವರ ಛಲವನ್ನು ತೋರಿಸುತ್ತದೆ. ಸಾಮಾಜಿಕ ಸಣ್ಣಾಟಗಳಿಗೆ ಸಂಗ್ಯಾಬಾಳ್ಯಾ, ರೂಪಸಿಂಗ ಉದಾಹರಣೆಗಳು.

ತಮ್ಮ ಹಿರಿಯರಿಂದ ಹರಿದು ಬಂದ ಜಾನಪದ ಕಥೆಯನ್ನಾಧರಿಸಿಯೂ ಜಾನಪದ ಸಣ್ಣಾಟಗಳು ರೂಪ ಪಡೆಯಬಹುದು. ಇದಕ್ಕೆ ಯಾವುದೇ ಬಗೆಯ ಪೌರಾಣಿಕ ಹಿನ್ನಲೆಯಾಗಲೀ, ಐತಿಹಾಸಿಕ ಹಿನ್ನಲೆಯಾಗಲೀ ಇರುವುದಿಲ್ಲ. ಅನೇಕ ಸಾಮಾಜಿಕ ಅಂಶಗಳು ಇಂಥ ಬಯಲಾಟದಲ್ಲಿ ಸೇರಿಕೊಂಡರೂ ಕೂಡಾ ಕಲ್ಪನೆಯ ಭಾವ ಹೆಚ್ಚಾಗಿ ವಾಸ್ತವತೆಗೆ ಹೊರತಾಗುತ್ತವೆ. ಮನರಂಜನೆಯೊಂದೇ ಇಲ್ಲಿ ದೊರೆಯುವ ಲಾಭಾಂಶ. ಜಾನಪದ ವಿಷಯವನ್ನೊಳಗೊಂಡ ಸಣ್ಣಾಟಗಳಿಗೆ ಬಸವಂತ-ಬಲವಂತ, ಧರ್ಮದೇವತೆಗಳನ್ನು ಹೆಸರಿಸಬಹುದು.

ಸಣ್ಣಾಟ ಕೃತಿರಚನೆ

ಬಹುತೇಕ ಬಯಲಾಟಗಳಂತೆ ಸಣ್ಣಾಟವು ಒಮ್ಮೆಲೇ ರಂಗದ ಮೇಲೆಯೇ ಸಿದ್ಧಗೊಳ್ಳುವುದಿಲ್ಲ. ಇದು ಮೂಲತಃ ಒಂದು ಕೃತಿಯಾಗಿ 'ಕವಿ'ಯಲ್ಲಿ ಜನ್ಮ ತಾಳುತ್ತದೆ. ಜನಪದ ಸಾಹಿತ್ಯ ನಿರಕ್ಷರಿಗಳಿಂದ ಹುಟ್ಟಿ ಬೆಳೆದಿದೆ ಎಂಬ ಮಾತಿದ್ದರೂ, ಸಣ್ಣಾಟಗಳಿಗೆ ಜನ್ಮ ಕೊಡುವವರು ತಕ್ಕ ಮಟ್ಟಿಗೆ ವಿದ್ಯಾಭ್ಯಾಸ ಮಾಡಿದವರು. ಪುರಾಣ, ಇತಿಹಾಸಗಳನ್ನು ಓದಿ

ಅರ್ಥೈಸಿಕೊಳ್ಳಬಲ್ಲ ಶಕ್ತಿಯನ್ನು ಪಡೆದವರು. ಕೆಲವು ಸಲ ಸ್ವಂತ ಇಷ್ಟದಿಂದಲೋ, ಕೆಲವುಸಲ ಆಟದ ಮೇಳದವರು ಕೇಳಿದ ಮೇರೆಗೋ, ಇವರು ಸಣ್ಣಾಟವನ್ನು ಬರೆಯುತ್ತಾರೆ. ಮೊದಮೊದಲು ಸಣ್ಣಾಟವನ್ನು ರಚಿಸಿದವರು, ಅದನ್ನು ಕೇವಲ ಗೀತರೂಪವಾಗಿ ರಚಿಸಿದರು. ರಂಗ ಭೂಮಿಯ ಮೇಲೆ ಕವಿಯ ಗೀತರೂಪದ ಸಾಹಿತ್ಯದೊಂದಿಗೆ ನಟರು ಆಡುವ ಗದ್ಯರೂಪದ ಸಂಭಾಷಣೆ ಬೆರೆತುಕೊಳ್ಳುತ್ತಿತ್ತು. ಹೀಗಾಗಿ ಪ್ರಯೋಗದಿಂದ ಪ್ರಯೋಗಕ್ಕೆ ವ್ಯತ್ಯಾಸಗಳು ಇರುತ್ತಿದ್ದವು. ಇದು ಗೀತೆಗಳೊಂದಿಗೆ ಸಂಭಾಷಣೆಯನ್ನೂ ಕವಿಗಳೇ ಸೇರಿಸಲು ಕಾರಣವಾಗಿರಬೇಕು. ಸಂಭಾಷಣಾ ಸಹಿತ ಸಣ್ಣಾಟಗಳು ಹುಟ್ಟಿಕೊಂಡ ಮೇಲೆ ಮೊದಲಿನ ಆಟಗಳು ಮರೆಯಾಗಲಿಲ್ಲ. ಇಂದಿಗೂ ಎರಡು ರೀತಿಯವು ಬಳಕೆಯಲ್ಲಿವೆ.

ಬೈಲವಾಡ ಪತ್ತಾರ, ಬಸರಗಿ ಕುಂಬಾರ, ಕಾದ್ರೊಳ್ಳಿ ನೀಲಕಂಠಪ್ಪ ಮುಂತಾದವರು ಬರೆದ ಸಣ್ಣಾಟಗಳಲ್ಲಿ ಕೆಲವು ಪ್ರಕಟಗೊಂಡಿವೆ, ಕೆಲವು ಹಸ್ತ ಪ್ರತಿ ರೂಪದಲ್ಲಿ ದೊರೆಯುತ್ತವೆ.

ಪ್ರಯೋಗ ಸಿದ್ಧತೆ

ದೊಡ್ಡಾಟ, ಶ್ರೀಕೃಷ್ಣಪಾರಿಜಾತಗಳನ್ನಾಡುವಾಗ ಹೇಗೋ ಹಾಗೆಯೇ ಸಣ್ಣಾಟಕ್ಕೂ ಸಿದ್ಧತೆ ಬೇಕು. ಬೇರೆ ಆಟದವರಿಂದ ಅಥವಾ ಆಟಗಳಿಂದ ಹಳ್ಳಿಪ್ರದೇಶದ ಕೆಲವು ಹುಟ್ಟುಕಲಾವಿದರು ಮೊದಲು ಹುರುಪುಗೊಳ್ಳುತ್ತಾರೆ. ಬೇರೆಲ್ಲಿಯೋ ಆಟ ಕಲಿತು ಆಡಿ ಕಾರಣಾಂತರಗಳಿಂದ ಆ ಮೇಳ ಬಿಟ್ಟು ಊರಿಗೆ ಬಂದವನೊಬ್ಬ ತರುಣರ ತಲೆಗೆ ಆಟದ ಗುಂಗು ಹಿಡಿಸಬಹುದು. ಇದಲ್ಲದೆ ನೇರವಾಗಿ ಒಂದು ಆಟ ನೋಡಿಯೇ ನಾಲ್ಕಾರು ಜನ ತರುಣ ಸ್ನೇಹಿತರು ತಾವೂ ಆಟವಾಡಬೇಕೆಂಬ ಹುಮ್ಮಸ್ಸು ತಾಳಬಹುದು. ಹೀಗೆ ಆಟವಾಡಬಹುದೆಂದು ತೀರ್ಮಾನವಾಗುತ್ತದೆ. ಕಲಿಸಲು ಮಾಸ್ತರನನ್ನು ಹುಡುಕುತ್ತಾರೆ. ಇಂಥ ಮಾಸ್ತರರಲ್ಲಿ ಹಲವಾರು ಆಟಗಳ ಜೋಪಡಿಗಳಿರುತ್ತವೆ. ಇವರು ಆಸೆಪಟ್ಟುದ್ದನ್ನು ಅವರು ಕಲಿಸಲು ಸಿದ್ಧವಾಗುತ್ತಾರೆ. ಇದಕ್ಕಾಗಿ ಒಂದು ಮನೆಯನ್ನು ಗೊತ್ತು ಮಾಡುತ್ತಾರೆ.

ಒಂದು ದಿನ ಮುಹೂರ್ತ ನೋಡಿ ಆಟಕ್ಕೆ ಸಂಬಂಧಿಸಿದ ಜೋಪಡಿಯಿಟ್ಟು ಪೂಜೆ ಮಾಡಲಾಗುತ್ತದೆ. ನಂತರ ಗೊತ್ತು ಪಡಿಸಿದ ಮನೆಯಲ್ಲಿ ದಿನಾಲು ಆಟದ ತಾಲೀಮು ಆರಂಭ. ಮಾಸ್ತರನ ಪಗಾರ, ಖರ್ಚು, ತಾಲೀಮು, ಸಂದರ್ಭದಲ್ಲಿ ತಗಲುವ ಖರ್ಚು ಇದಕ್ಕೆಲ್ಲಾ

ಆಟವಾಡುವ ಹವ್ಯಾಸಿಗಳೇ ಪಟ್ಟಿಹಾಕಿಕೊಂಡಿರುತ್ತಾರೆ. ಮಾಸ್ತರನು ಸಂಗೀತ, ಸಂಭಾಷಣೆ ಈ ಎರಡು ಅಂಶಗಳ ಕಡೆಗೆ ವಿಶೇಷ ಒತ್ತುಕೊಟ್ಟು ಕಲಿಸುತ್ತಾನೆ. ಹೀಗೆ ಸಿದ್ಧಗೊಂಡ ಆಟವನ್ನು ಮೊದಲು ತಮ್ಮ ಊರಲ್ಲಿಯೇ ಆಡುವುದು ಸಾಮಾನ್ಯ. ತರುವಾಯ ಪರ ಊರುಗಳಿಗೆ ಹೋಗುವುದುಂಟು. ಹೀಗೆ ಇದು ಹಲವಾರು ಕಡೆಗಳಲ್ಲಿ ಸಂಚರಿಸುತ್ತ ಕ್ರಮೇಣ ಒಂದು ಕಂಪನಿಯೇ ಆಗುವುದೂ ಉಂಟು.

ರಂಗಪ್ರಯೋಗ

ಚೆನ್ನಾಗಿ ತಾಲೀಮು ಪಡೆದ ಅನಂತರ ಕಲಾವಿದರು ಆಟ ಆಡಲು ಸಿದ್ಧರಾಗುತ್ತಾರೆ. ಮೊದಲು ತಮ್ಮ ಊರಲ್ಲಿ ಅನಂತರ ಪರ ಊರಲ್ಲಿ ಆಡುತ್ತಾರೆ. ಇದಕ್ಕಾಗಿ ಊರ ಜನರಿಗೆ ಅನುಕೂಲವಾಗುವ ಒಂದು ಬಯಲಿನಲ್ಲಿ ಸಣ್ಣಾಟದ ರಂಗಸಜ್ಜಿಕೆಯನ್ನು ನಿರ್ಮಿಸಲಾಗುವುದು.



ರಂಗಮಂಟಪದ ಸಿದ್ಧತೆ

ದಪ್ಪಿನಾಟದ ರಂಗಸಜ್ಜಿಕೆ ತುಂಬ ಸರಳವಾಗಿರುತ್ತದೆ. ಚೌಕಾಕಾರದ ನಾಲ್ಕು ಮೂಲೆಗಳಲ್ಲಿ ಚಕ್ಕಡಿಯ ಗಾಲಿಗಳನ್ನು ಸ್ವಲ್ಪಮಟ್ಟಿಗೆ ಹುಗಿಯಲಾಗಿರುತ್ತದೆ. ಮೇಲಿನ ಬದಿಯಲ್ಲಿ ತೆರವಾಗಿರುವ ಹಲ್ಲುಗಳಲ್ಲಿ ಕಟ್ಟಿಗೆಯ ದಿಂಡುಗಳನ್ನು ಸೇರಿಸಿಕೊಂಡು ಅದರ ಮೇಲೆ ಫಳಿ(ಹಲಗೆ)ಯನ್ನು ಜೋಡಿಸಲಾಗುತ್ತದೆ. ನಾಲ್ಕು ಬದಿಯಲ್ಲಿ ಗಾಲಿಗಳಿಗೆ ತಗುಲಿದಂತೆ ಎತ್ತರವಾದ ಬೊಂಬುಗಳನ್ನು ಹುಗಿದು ಮೇಲೆ ಸುಮಾರು ಹತ್ತು ಅಡಿ ಅಂತರದಲ್ಲಿ ಚೌಕಾಕಾರದ ಬಿದಿರು ಗಳ ಕಟ್ಟಿಕೊಂಡು ಅದರ ಮೇಲೆ ಗುಡಾರ ಅಥವಾ ತಾಡಪತ್ರಿಯನ್ನು ಹೊಚ್ಚಲಾಗುತ್ತದೆ. ರಂಗದ ಎದುರು ಮತ್ತು ಮಗ್ಗುಲು ಎರಡೂ ಬದಿಗಳು ತೆರವಾಗಿರುತ್ತವೆ. ಹಿಂಬದಿಯಲ್ಲಿ ಮಾತ್ರ ಗುಡಾರ ಕಟ್ಟಿ ಮರೆಮಾಡಲಾಗುತ್ತದೆ. ಹೀಗೆ ಸಜ್ಜುಗೊಂಡ ರಂಗಸ್ಥಳಕ್ಕೆ ಉತ್ತರ ಕರ್ನಾಟಕದಲ್ಲಿ ಅಟ್ಟಿ, ಅಡ್ಡೆ ಎಂಬ ಬೇರೆ ಹೆಸರುಗಳೂ ರೂಢಿಯಲ್ಲಿವೆ.

ದಪ್ಪು, ಪೇಟಿ (ಹಾರ್ಮೋನಿಯಂ) ತಾಳ - ಇವು ಸಣ್ಣಾಟದ ವಾದ್ಯಗಳು. ತಮ್ಮ ಈ ವಾದ್ಯಗಳೊಂದಿಗೆ ರಂಗಸ್ಥಳಕ್ಕೆ ಸಮೀಪವಿರುವ ಬಣ್ಣದ ಕೋಣೆಗೆ ಕಲಾವಿದರು ಆಗಮಿಸುತ್ತಾರೆ. ರಂಗಪ್ರಯೋಗಕ್ಕೆ ಒಂದೆರಡು ತಾಸು ಮುಂಚಿತವಾಗಿ ಪಾತ್ರಧಾರಿಗಳ ತಯಾರಿ ಬಣ್ಣದ ಕೋಣೆಯಲ್ಲಿ ನಡೆಯುತ್ತದೆ. ಇಲ್ಲಿಯೇ ನಾವು ಇವರ ಬಣ್ಣಗಾರಿಕೆ, ವೇಷಗಾರಿಕೆಯನ್ನು ಗುರುತಿಸಬಹುದು. ಆಟದ ಮೇಳದವರೆ ತಮ್ಮ ಬಣ್ಣದ ಸಲಕರಣೆಗಳನ್ನು ತಂದಿರುತ್ತಾರೆ. ಅವರು ಸಾಮಾನ್ಯವಾಗಿ ಆಟ ಆಡಿಸುವವರಿಂದ ಕೇಳುವುದು ಒಂದಿಷ್ಟು ಪೀತಾಂಬರಗಳನ್ನು. ಮೊದಲು ಬಣ್ಣ ಬಳೆದುಕೊಂಡು, ತರುವಾಯ ವೇಷಗಳನ್ನು ತೊಡಲಾಗುತ್ತದೆ. ಸಣ್ಣಾಟದ ಪಾತ್ರಗಳು ಸಾಮಾನ್ಯವಾಗಿ ತಿಳಿಗುಲಾಬಿ ಬಣ್ಣವನ್ನೇ ಮುಖಕ್ಕೆ ಹಚ್ಚಿಕೊಳ್ಳುತ್ತವೆ. ತುಟಿಗೆ ಕುಂಕುಮ ಕೆಂಪನ್ನು ಲೇಪಿಸಲಾಗುತ್ತದೆ. ಹುಬ್ಬಿಗೆ ಕಾಡಿಗೆ ಹಚ್ಚಿಕೊಳ್ಳುವುದು ಎಲ್ಲಾ ಪಾತ್ರಗಳಿಗೆ ಸಾಮಾನ್ಯ.

ಬಣ್ಣ ಬಳಿದುಕೊಂಡಾದ ಮೇಲೆ ವೇಷಾಲಂಕಾರ. ಪುರುಷ ಪಾತ್ರಧಾರಿಗಳು ಸಾಮಾನ್ಯವಾಗಿ ಮಸರಾಯಿ ಧೋತ್ರ ಉಟ್ಟು, ಟೆರಿಕಾಟ್ (ಹಿಂದಿನ ಕಾಲಕ್ಕೆ ಪಾಪಲೀನ್) ಅಂಗಿ ತೊಡುತ್ತಾರೆ. ಪಟಕ, ಸಣ್ಣಾಟದ ಬಹುತೇಕ ಪುರುಷ ಪಾತ್ರಗಳ ವಿಶೇಷತೆ. ಅದರಲ್ಲಿಯೂ ಮುಖ್ಯ ಪಾತ್ರಧಾರಿಗೆ ಗೋಡಂಬಿ ಪಟಕವೇ ಆಗಬೇಕು. ಇತ್ತಿತ್ತಲಾಗಿ ಗೋಡಂಬಿ ಪಟಕ ಕಡಿಮೆಯಾದ ಮೇಲೆ ಹಳದಿ ಬಣ್ಣದ ರೇಶಿಮೆಯ ಪಟಕವನ್ನು ಸುತ್ತಲಾಗುತ್ತದೆ. ಸ್ತ್ರೀಪಾತ್ರಧಾರಿಗಳು ಢಾಳವಾದ ಬಣ್ಣದ ಪೀತಾಂಬರ ಅಥವಾ ಇಲಕಲ್ ಸೀರೆಯುಡುತ್ತಾರೆ. ಈಗ ಬಣ್ಣಬಣ್ಣದ ಪತ್ತಲ ಉಡುವುದು ಸಾಮಾನ್ಯವಾಗಿ ಹೋಗಿದೆ. ಸಣ್ಣಾಟದಲ್ಲಿ ಆಭರಣಗಳ



ಪ್ರಸಾಧನದಲ್ಲಿ ನಿರತರಾದ ಕಲಾವಿದರು

ಅಲಂಕಾರ ಕಡಿಮೆ. ಪುರುಷ ಪಾತ್ರಗಳಲ್ಲಿ ನಾಯಕ ಪಾತ್ರಧಾರಿಯು, ಕೊರಳಲ್ಲಿ ಮುತ್ತಿನ ಹಾರ ಹಾಕಿಕೊಳ್ಳಬಹುದು. 'ಸಂಗ್ಯಾಬಾಳ್ಯ' ಬಯಲಾಟದ ಸಂಗ್ಯಾ 'ಕಟ್ಟೆ-ಚಿನ್ನ' ಬಯಲಾಟದ ಚೆನ್ನನ ಪಾತ್ರ, ಇಂಥ ಹಾರ ಹಾಕುವುದಿದೆ. ಸ್ತ್ರೀಪಾತ್ರಗಳು ಮಾತ್ರ- ಅದರಲ್ಲೂ ನಾಯಕಿ-ಕೊರಳಲ್ಲಿ ಹಲವಾರು ಬಗೆಯ ಆಭರಣಗಳನ್ನು ಹಾಕಿಕೊಳ್ಳುವುದುಂಟು. ಸಣ್ಣಾಟದ ನಾಯಕಿಯ ಪಾತ್ರವನ್ನು ಸಾಮಾನ್ಯವಾಗಿ ಸ್ತ್ರೀಯೇ ನಿರ್ವಹಿಸುವುದುಂಟು. ಇತರ ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡುತ್ತಾರೆ. ಇದಕ್ಕೆ ಕಾರಣಗಳು ಬೇರೆ ಬೇರೆ ಇರಬಹುದು. ಮೊದಲನೆಯದು ಆಟಗಳಲ್ಲಿ ಭಾಗವಹಿಸಲು ಸ್ತ್ರೀಯರ ಕೊರತೆ, ಎರಡನೆಯದು ಒಂದೊಂದು ಆಟಕ್ಕೆ ಇಬ್ಬರು ಮೂವರು ಮಹಿಳೆಯರನ್ನು ತರುವುದು ಹಣಕಾಸಿನ ದೃಷ್ಟಿಯಿಂದ ಭಾರವೆನ್ನಿಸಬಹುದು.

ವೇಷಾಲಂಕಾರದ ತರುವಾಯ ಬಣ್ಣದ ಕೋಣೆಯಲ್ಲಿ ಪೂಜೆಯಾದ ಮೇಲೆ ರಂಗಭೂಮಿಗೆ ಪಾತ್ರಗಳು ಬಂದು ಆಟಕ್ಕೆ ಅಣಿಯಾಗುತ್ತದೆ. ಸಣ್ಣಾಟ, ಸ್ತುತಿ ಪದ್ಯದೊಂದಿಗೆ ಪ್ರಾರಂಭಗೊಳ್ಳುತ್ತವೆ. ಅದರಲ್ಲೂ ಗಣಪತಿ ಸ್ತುತಿ ಬಹುಮುಖ್ಯವೆಂದು ತಿಳಿಯುತ್ತಾರೆ.

ಬಾ ಗಜವದನಾ। ಬಾ ಗಜವದನಾ
ಬಾ ಗಜವದನಾ। ಇಡೊ. ಕರುಣಾ

ಮೂಸಕ ಧೀರಾ ವಾಸುಕಿ ಹಾರಾ
ಪಾಶಾಂಕುಶಧರಾ ಈಶ ಗಣೇಸೊರಾ

ದುರಿತ ಸಂವಾರನಾ। ಸುರನುತ ಚರಣಾ
ವರಗುಣ ಭರಣಾ। ತರಳರೊಳನುದಿನಾ

ನುತಜನ ಪಾಲಾ। ಯತಿ ಜನ ಲೋಲಾ
ನೀಲಕಂಠ ಬಾಲಾ। ಸದ್ಗುಣ ಶೀಲಾ.

ಹೀಗೆ ಸ್ತುತಿ ಪದ್ಯದೊಂದಿಗೆ ಪ್ರಾರಂಭವಾಗುವ ಸಣ್ಣಾಟ ತರುವಾಯ ಕಥೆಯನ್ನು ಆರಂಭಿಸಿ ಮುನ್ನಡೆಯುತ್ತದೆ.

ಪಾತ್ರಗಳ ಹಿಂಬದಿಯಲ್ಲಿ ನಿಂತು ಹಾಡುವವರಲ್ಲಿ ಮುಮ್ಮೇಳ, ಹಿಮ್ಮೇಳವೆಂದು ಎರಡು ಬಗೆ. ಮುಮ್ಮೇಳದಲ್ಲಿ ಹಾಡಲು ಒಬ್ಬನಿರಬಹುದು ಅಥವಾ ಇಬ್ಬರಿರಬಹುದು. ಮುಮ್ಮೇಳದವರು ಹಾಡಿಬಿಟ್ಟ ಪಲ್ಲವಿಯನ್ನೋ, ನುಡಿಯ ಚರಣಗಳನ್ನೋ ಹಿಮ್ಮೇಳದವರು ಹಾಡುತ್ತ ಹೋಗುತ್ತಾರೆ. ಮುಮ್ಮೇಳದವರು ಆಟದ ಮುನ್ನಡೆಗೆ ಆಧಾರವಾಗಿ ನಿಂತ ಎಲ್ಲ ಹಾಡುಗಳನ್ನು ಹಾಡುತ್ತಾ ಕಥೆ ಸಾಗಿಸಿಕೊಂಡು ಹೋಗುವುದರಿಂದ ಇವರನ್ನು 'ಕಥೆಗಾರರು' ಎಂದೂ ಕರೆಯುವುದುಂಟು.

ದಪ್ಪು, ಹಾರ್ಮೋನಿಯಂ, ತಾಳ- ಇವೆಲ್ಲ ಸಣ್ಣಾಟದ ವಾದ್ಯಗಳಾದರೂ ಸಣ್ಣಾಟಕ್ಕೆ ವಿಶೇಷ ಮೆರಗು ತುಂಬುವುದು ದಪ್ಪಿನ ನಿನಾದದಿಂದಲೇ. ದಪ್ಪಿನವನು ತಾಳ-ಲಯಕ್ಕೆ ತಕ್ಕಂತೆ ಛಾಪು ಹಾಕುತ್ತ ರಂಗದ ತುಂಬ ಅಡ್ಡಾಡಿ ಬಾರಿಸುತ್ತಾನೆ, ವಿಶೇಷ ರಂಗು ತುಂಬುತ್ತಾನೆ. ದಪ್ಪು ಬಾರಿಸುವವ ಎಡಗೈಯಲ್ಲಿ ಬಿದಿರಿನ ಕಡ್ಡಿ ಹಿಡಿದಿರುತ್ತಾನೆ. ಎಡಮುಂಗೈಯ ಸಹಾಯದಿಂದ ದಪ್ಪನ್ನು ಎದೆಗೆ ಆನಿಸಿಕೊಂಡು ಬಲಗೈಯಿಂದ ಛಾಪು ಹಾಕುತ್ತಿರುವಂತೆ ಎಡಗೈಯ ಬೆರಳಲ್ಲೇ ಹಿಡಿದ ಬಿದಿರ ಕಡ್ಡಿಯಿಂದ ವಿಶಿಷ್ಟ ಬಗೆಯ ರಂಜಕನಾದವನ್ನು ಹೊರಡಿಸುತ್ತಾನೆ. ಬಲಗೈಯ ತುದಿಬೆರಳಿನಿಂದಲೂ ಬೇರೊಂದು ಬಗೆಯಾದ ನಾದವನ್ನು ಹೊರಡಿಸುವುದಿದೆ. ಆಟ



ನಡೆದಿರುವಾಗ ಒಂದೇ ದಪ್ಪು ಇದ್ದರೆ ಸಾಲದು. ಸಣ್ಣಾಟಕ್ಕೆ ಎರಡು ದಪ್ಪುಗಳು ಬೇಕಾಗುತ್ತವೆ. ದಪ್ಪಿನವ ಲಹರಿಗೊಂಡು ಚೆನ್ನಾಗಿ ಬಾರಿಸುತ್ತ ಹೋದಂತೆ, ದಪ್ಪಿನ ನಾದ ಇಳಿಯುವ ಸಾಧ್ಯತೆಯಿರುತ್ತದೆ. ನಾದ ಇಳಿದ ದಪ್ಪನ್ನು ಕಾಯಿಸಲು ಕೊಟ್ಟು ಚೆನ್ನಾಗಿ ಕಾದು ಸಜ್ಜುಗೊಂಡ ಇನ್ನೊಂದು ದಪ್ಪನ್ನು ತರಲಾಗುತ್ತದೆ. ಹೀಗೆ ಮೇಲಿಂದ ಮೇಲೆ ದಪ್ಪುಗಳನ್ನು ಕಾಯಿಸಬೇಕಾಗಿರುವುದರಿಂದ ರಂಗಸ್ಥಲಕ್ಕೆ ಸ್ವಲ್ಪದೂರದಲ್ಲಿ ರಾತ್ರಿಯುದ್ದಕ್ಕೂ ಬೆಂಕಿ ಸಜ್ಜುಗೊಂಡಿರಬೇಕಾಗುತ್ತದೆ.

ಎಲ್ಲ ಸಣ್ಣಾಟದವರೂ ಕಾಲುಪೇಟಿಯನ್ನೇ ಬಳಸುತ್ತಾರೆ. ತಾಳಿನವರು ಗುಂಡದಾಳು ಉಪಯೋಗಿಸುತ್ತಾರೆ. ದಪ್ಪು, ಹಾರ್ಮೋನಿಯಂ, ತಾಳಿನವರು ಹಾಡುಗರನ್ನು ಹಿಂಬಾಲಿಸುವುದು ಸಹಜವೇ. ಕೆಲವು ವೇಳೆ ಹಾಡು ಇರದಾಗಲೂ ದಪ್ಪಿನವನನ್ನು ಅನುಸರಿಸಿ, ಪೇಟಿಯವನೋ



ಆಟ ನಡೆಯುತ್ತಿರುವುದು

ಪೇಟಿಯವನನ್ನು ಅನುಸರಿಸಿ ದಪ್ಪಿನವನೋ ತಮ್ಮ ಕಲಾಪ್ರತಿಭೆಯನ್ನು ಮೆರೆಯುತ್ತಾರೆ. ಇವರಿಬ್ಬರ ಪ್ರಮಾಣದಲ್ಲಿ ಅಲ್ಲದಿದ್ದರೂ ತಾಳಿನವರೂ ಆಗೀಗ ಮಿಂಚುವುದುಂಟು.

ಪಾತ್ರಧಾರಿಗಳು ಉಳಿದ ಮೂವರಿಗಿಂತ ಮುಖ್ಯರಾದವರು. ಇವರೇ ಆಟದ ಮುಖ್ಯ ವಾಹಕರುಗಳು. ಆಟ ಇವರನ್ನೇ ಅವಲಂಬಿಸಿರುತ್ತದೆ; ಸಣ್ಣಾಟದಲ್ಲಿ ವೇಷ ಭೂಷಣಗಳು ಮಾತ್ರ ಪಾತ್ರಧಾರಿಯ ವ್ಯಕ್ತಿತ್ವವನ್ನು ನಿರ್ಧರಿಸಬೇಕಾಗಿಲ್ಲ. ನಟರ ಅಭಿನಯ-ಹಾಡು-ಮಾತುಗಳೇ ಅವರ ಕಲಾಪ್ರತಿಭೆಯ ಮಟ್ಟವನ್ನು ಗುರುತಿಸುತ್ತವೆ.

ಹಾಡು-ಸಂಭಾಷಣೆ

ಸಣ್ಣಾಟದ ಹಾಡು ಮತ್ತು ಮಾತುಗಳದೇ ಒಂದು ವಿಶೇಷ. ಇಲ್ಲಿ ಪಾತ್ರವೇ ಹಾಡಬೇಕೆಂದಿಲ್ಲ. ಈ ಹಾಡು ಹಾಡುವುದಕ್ಕೆಂದೇ ಮುಮ್ಮೇಳ-ಹಿಮ್ಮೇಳದವರಿರುತ್ತಾರೆ. ಇವರು ಹಾಡು ಹೇಳುತ್ತಿರುವಂತೆ ಪಾತ್ರಧಾರಿ ಹಾಡಿನ ಅರ್ಥವನ್ನು ಅನುಸರಿಸಿ ಅಭಿನಯಿಸುತ್ತ ಸಣ್ಣಾಗಿ ಹಾಡಬಹುದು, ಅಥವಾ ತುಟಿ ಅಲುಗಿಸಬಹುದು. ಮುಮ್ಮೇಳ, ಹಿಮ್ಮೇಳದವರು ಹಾಡನ್ನು ಹಾಡಿ ಪೂರೈಸಿದ ಮೇಲೆ ನಟ ಅಥವಾ ನಟಿ ಆ ಹಾಡಿನ ಭಾವವನ್ನು ಮಾತಾಗಿ ಪರಿವರ್ತಿಸಿ ಹೇಳಬೇಕಾಗುತ್ತದೆ. ಹಾಡಿನ ಪ್ರತಿಯೊಂದು ಸಾಲಿನ ಅರ್ಥವನ್ನು ಇಲ್ಲಿ ಬಿಡಿಸಿ ಹೇಳಲಿಕ್ಕಿಲ್ಲ. ಆದರೆ ಹಾಡಿದಷ್ಟು ನುಡಿಗಳ ಒಟ್ಟು ಸಾರಾಂಶ ಮಾತ್ರ ಪಾತ್ರದ ಮಾತಿನಲ್ಲಿ ಮತ್ತೆ ಬರುತ್ತದೆ.

ಒಳ್ಳೆಯ ನಟ ಸ್ವತಂತ್ರ ಸಂಭಾಷಣೆಯನ್ನು ಹೆಣೆಯಬಲ್ಲನಾದರೂ ಮೂಲತಃ ತಮ್ಮ ಮೇಳದ ಮಾಸ್ತರ ಕಲಿಸಿಕೊಟ್ಟ ಮಾತಿನ ಕಡೆಗೇ ಹೆಚ್ಚು ಲಕ್ಷವಿಟ್ಟು ಮಾತೊಪ್ಪಿಗೆ ನಡೆದಿರುತ್ತದೆ. ಚೀರಿಚೀರಿ ಮಾತನಾಡುವುದು, ಜೋರಾಗಿ ಹಾಡುವುದು ಮುಖ್ಯವೆಂದು ಇಲ್ಲಿ ಭಾವಿಸಲಾಗುತ್ತದೆ. ಹೇ ಗೆಳೆಯಾ, ಹೇ ಅಣ್ಣಾ, ಹೇ ತಮ್ಮಾ ಎಂದು ಸಂಭೋಧಿಸಿಯೇ ಮಾತು ಪ್ರಾರಂಭಿಸುವುದು ಸಣ್ಣಾಟದ ಪದ್ಧತಿ.

ಪೌರಾಣಿಕ, ಚಾರಿತ್ರಿಕ, ಸಾಮಾಜಿಕ, ಜಾನಪದ-ದಪ್ಪಿನಾಟ ಯಾವುದೇ ಇರಲಿ, ಇದರ ಭಾಷೆ, ಶಿಷ್ಟ ಮತ್ತು ಆಡುನುಡಿಗಳ ಮಧ್ಯದಲ್ಲಿ ಜೀಕುತ್ತದೆಂಬುದನ್ನು ಗಮನಿಸಬೇಕು.

'ಕಟ್ಟೆ-ಚೆನ್ನ' ಸಣ್ಣಾಟದ ಒಂದು ಸನ್ನಿವೇಶದ ಮುಖಾಂತರ ಸಣ್ಣಾಟದಲ್ಲಿ ಹಾಡು-ಸಂಭಾಷಣೆಗಳ ಹೊಂದಾಣಿಕೆ ಹೇಗಿರುತ್ತದೆಂಬುದನ್ನು ಈಗ ನೋಡಬಹುದು.

'ಕಟ್ಟೆ-ಚೆನ್ನ' ಸಣ್ಣಾಟದ ಒಂದು ಸನ್ನಿವೇಶ

ಅಣ್ಣನಾದ ಗದಿಗೆಪ್ಪನು ನಾಗರಪಂಚಮಿಗೆ ತನ್ನ ತಂಗಿಯನ್ನು ಕರೆಯಲು ತನ್ನ ತಮ್ಮನನ್ನು ಕಳಿಸುವ ದೃಶ್ಯ:

ಗದಿಗೆಪ್ಪ – ತಮ್ಮಾ, ಚೆನ್ನಪ್ಪ, ಚೆನ್ನಪ್ಪ,

ಚೆನ್ನಪ್ಪ – ಯಾಕಪಾ ಅಣ್ಣಾ !

ಗದಿಗೆಪ್ಪ – ಎಲ್ಲಿ ಹೋಗಿದ್ದೆಪಾ ತಮ್ಮಾ,

ಚೆನ್ನಪ್ಪ – ನಾ ಆಚಿಕಡೆ ಓಣಿಯಲ್ಲಿ ಗುಂಡಗಜಗದ ಆಟವನ್ನು
ಆಡಲು ಹೋಗಿದ್ದೆನಣ್ಣಾ !

ಗದಿಗೆಪ್ಪ – ಏನಪಾ, ತಮ್ಮಾ ಹೇಳ್ತೇನೆ ಕೇಳು.

ಚೆನ್ನಪ್ಪ – ಅಣ್ಣಾ, ಅದೇನೆಂದು ಹೇಳುವಂಥವನಾಗು.

ಗದಿಗೆಪ್ಪ – ಎನ್ನ ಬುದ್ದುಳ್ಳ ತಮ್ಮಯ್ಯ ತಿದ್ದಿ ಹೇಳುವೆ ನಿನಗ
ಸಂದೇಶ ಲಾಲಿಸೊ ಎನ್ನ ಮಾತಾ ॥ಪಲ್ಲವಿ॥

ನಾಗರ ಪಂಚಮಿಗೆ ತಂಗಿನ ಕರಿಲಾಕ
ಹೋಗಿ ಬಾರಪ್ಪಾ ನೀನು ಬ್ಯಾಗನಾ

ಹಂಡ ಹೋರಿ ಹಿಡಕೊಂಡ। ಪುಂಡನಾಗಿ ಹತ್ತಿಕೊಂಡ
ಹೋಗಿ ಬಾರಪ್ಪಾ ನೀನು ಬ್ಯಾಗನಾ

ನಮಗೆ ತಂಗಿ ಇರಾಕಿ ಒಬ್ಬಾಕಿ. ನಾಗರಪಂಚಮಿಯೆಂದರೆ ನಾಡಿಗೆ ದೊಡ್ಡದು. ಆದ್ದರಿಂದ ತ್ವಾನಗಟ್ಟಿಗೆ ಹೋಗಿ ತಂಗಿನ್ನಾದರೂ ಕರಕೊಂಡ ಬರಬೇಕ ನೋಡಪಾ.

ಚೆನ್ನಪ್ಪ - ಅಣ್ಣಾ, ಹಾಗಾದರೆ ಹೇಳ್ತಿನ ಕೇಳು.

ಗದಿಗೆಪ್ಪ - ತಮ್ಮಾ, ಅದೇನ ಹೇಳುವಂಥವನಾಗು

ಚೆನ್ನಪ್ಪ - ಎನ್ನ ಮತಿವಂತ ಅಣ್ಣಯ್ಯ। ಹಿತದಿಂದ ಕೇಳೋ ನೀನಾ
ಪ್ರೀತಿಲಿಂದಲಿ ಕೊಡೊ ಅಪ್ಪಣೆನಾ ॥ಪಲ್ಲವಿ॥

ಬೀಗರ ಮನಿತನಾ। ಹೋಗಾಂವ ಆಗಿ ಟೀಕಾ
ಗೋಪ ಚಂದರ ಹಾರಾ ಕೊಡೊ ನೀನಾ.

ನಾಕಮಂದಿ ಗೆಳೆಯಾರೊಳಗ॥ ಇರುವಾಂವ ಕಾಮನ್ನಾಂಗ
ದೋತರ ಕರವತ ಕಾಟಿ ಉಡಾವನಾ.

ಮದರಿ ರುಮಾಲ ಸುತ್ತಿ ಜರದ ಸೆಲ್ಲೇವ ಹೊತ್ತು
ಇಷ್ಟು ಎಲ್ಲಾ ಕೊಟ್ಟರ ಹೋಗುವೆ ನಾ.

ಅದೇ ಅಣ್ಣಾ,

ಗದಿಗೆಪ್ಪ – ಏನಪಾ ತಮ್ಮಾ,

ಚೆನ್ನಪ್ಪ – ನಾಯೇನು ತಂಗಿನ ಕರಿಯಾಕ ಹಾಗೇ ಹೋಗುದಿಲ್ಲಪಾ.

ಗದಿಗೆಪ್ಪ – ಮತ್ತ ಹೆಂಗ ಹೋಗಾಂವಪಾ ತಮ್ಮಾ,

ಚೆನ್ನಪ್ಪ – ಅಣ್ಣಾ, ನನಗೆ ಏನು ಬೇಕು ಎಂದರೆ,

ಗದಿಗೆಪ್ಪ – ಏನ ಬೇಕಪಾ ?

ಚೆನ್ನಪ್ಪ – ಕರವತ್ತ ಕಾಟಿ ಧೋತ್ರಾ ಮತ್ತು ಇದು ಅಲ್ಲದೆ ಗೋಪಚಂದರ ಹಾರಾ. ಇದು ಅಲ್ಲದೆ ಆ ಹಂಡಗುಂಡ ಹೋರಿಯನ್ನು ಕೊಟ್ಟರೆ ಇವೊತ್ತಿನ ದಿನಾ ಹೋಗಿ ನಾಳಿನ ದಿನಾ ಎಷ್ಟೊತ್ತಿದ್ದರೂ ತಂಗಿಯನ್ನು ಕರೆದುಕೊಂಡು ಬರುತ್ತೇನೆ.

ಗದಿಗೆಪ್ಪ – ಅಪಾ ತಮ್ಮಾ ಹೋಗಿ ಬಾ.

ಸಣ್ಣಾಟದಲ್ಲಿ ವಿಶೇಷವಾಗಿ ಸೇರಿಕೊಳ್ಳುವ ಗೊಲ್ಲತಿ ದೃಶ್ಯದ ಬಗ್ಗೆ ಎರಡು ಮಾತು. ಗೊಲ್ಲತಿ ದೃಶ್ಯದ ಸೇರ್ಪಡೆ ಅನೇಕ ಸಣ್ಣಾಟಗಳಲ್ಲಿ ಪೂರ್ವರಂಗವಾಗಿ ಬರುತ್ತದೆ. ಗೊಲ್ಲತಿಯೊಬ್ಬಳು ಹಾಲು, ಮೊಸರು ಮಾರುತ್ತ ಬಂದು ತನ್ನ ಪರಿಚಯವನ್ನು ಬಹಳ ಹೊತ್ತು ಮಾಡಿಕೊಳ್ಳುತ್ತಾಳೆ. ಗೋಕುಲಕ್ಕೆ ಹಾಲು ಮಾರಲು ಹೋದರೆ ಅಲ್ಲಿ ಗೋಪಾಲ ಬಂದು ಅವಳನ್ನು ಸುಂಕ ಕೊಡಲು ಪೀಡಿಸುತ್ತಾನೆ. ಇವಳು ಕೊಡಲು ಸಿದ್ಧಳಿಲ್ಲ. ಸಾಕಷ್ಟು ವಾದವಿವಾದ ನಡೆಯುತ್ತದೆ. ಈ ಸಂದರ್ಭದಲ್ಲಿ ಅನೇಕ ಹಾಡು ಮಾತುಗಳು ರಮಣೀಯವೆನಿಸುತ್ತದೆ.

ಶೃಂಗಾರ ಪ್ರಧಾನವಾದ ಈ ದೃಶ್ಯ 'ರಾಧಾನಾಟ'ಕ್ಕೆ ಮಾತ್ರ ಹೊಂದಿಕೊಳ್ಳುವಂಥದು. ಉಳಿದ ಸಣ್ಣಾಟಗಳಲ್ಲಿ ಮುಂದಿನ ಕಥೆಗೆ ಯಾವುದೇ ಬಗೆಯ ಸಂಬಂಧವನ್ನು ಪಡೆಯುವುದಿಲ್ಲ. ಇದು ಈ ರೀತಿ ತೇಪೆ ಹಚ್ಚಿದಂತೆ ತೋರುತ್ತಿದ್ದರೂ ಇದು ಸೇರ್ಪಡೆಯಾಗುವುದಕ್ಕೆ ಇದರ ಶೃಂಗಾರವೇ ಕಾರಣವಾಗಿರಬಹುದು.

ಪ್ರಾರಂಭದಲ್ಲಿ ದೇವತಾ ಸ್ತುತಿಯಾದಮೇಲೆ ಹಾಡು-ಸಂಭಾಷಣೆಗಳ ಮೂಲಕ ಕಥಾನಕ ಮೈತುಂಬಿಕೊಳ್ಳುತ್ತದೆ. ಕೊನೆಯಲ್ಲಿ ಮುಕ್ತಾಯಗೊಳ್ಳುವುದು ಮಂಗಳಾರತಿಯ ಮೂಲಕ. ಇದು ಕವಿ ಬರೆದ ಹಾಡಾಗಿರಬಹುದು-ಇನ್ನಾರದೋ ಆಗಿರಬಹುದು.

ಕಥೆ, ಹಾಡು ಸಂಭಾಷಣೆಯ ಮುಖಾಂತರ ಸಾಗುವ ಸಣ್ಣಾಟ ವಿಶೇಷವಾಗಿ ಸಾಮಾನ್ಯರನ್ನು ಗಮನದಲ್ಲಿ ಇರಿಸಿಕೊಂಡೇ ಸಾಗುತ್ತದೆ. ಇಡಿಯಾಗಿ ಸಣ್ಣಾಟದಲ್ಲಿ ಬರುವ ಕೆಲವು ಅಂಶಗಳನ್ನು ಹೀಗೆ ಹೇಳಬಹುದು.

೧. ಪಾಪ-ಪುಣ್ಯಗಳ ಚರ್ಚೆ

೨. ಜೀವನ ಅಶಾಶ್ವತವೆಂಬ ನಂಬಿಕೆ.

೩. ಹೆಣ್ಣು-ಗಂಡು ಯಾರು ಹೆಚ್ಚೆಂಬ ವಾದ.

೪. ಪತಿವ್ರತಾ ಧರ್ಮ.

೫. ನೀತಿ ಮತ್ತು ಭಕ್ತಿ

ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಣ್ಣಾಟ ತೀರ ಆತ್ಮೀಯವಾಗಿ ಸಾಮಾಜಿಕರೊಳಗೆ ಸೇರಿ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುತ್ತದೆ. ಈ ಆತ್ಮೀಯತೆ ಗಳಿಸಿಕೊಳ್ಳುವ ಉದ್ದೇಶದಿಂದಲೇ ಜನಸಾಮಾನ್ಯರಿಗೆ ತೀರ ಹತ್ತಿರವಾದ ನಿಜ ಸಂಗತಿಗಳನ್ನು ಕೆಲವು ಸಣ್ಣಾಟಗಳು ಆರಿಸಿಕೊಂಡವು. ಈ ಹಿನ್ನೆಲೆಯಲ್ಲಿಯೇ ರಾಧೆ ಪೌರಾಣಿಕ ವ್ಯಕ್ತಿಯಾಗಿದ್ದರೂ ಸಾಮಾಜಿಕವಾಗಿಯೇ 'ರಾಧಾನಾಟ'ದಲ್ಲಿ ಬೆಳೆಯುತ್ತಾಳೆ. ರಾಧಾನಾಟದ ನಡೆ ಹರದೇಸಿ-ನಾಗೇಸಿ ಗೀಗೀ ಸಂಪ್ರದಾಯದಿಂದ ಪ್ರಭಾವಗೊಂಡುದು. 'ರೂಪಸಿಂಗ'ನ ಆಟ ಸಾಮಾಜಿಕ ಬದುಕಿನ ಪರಿಸರದಲ್ಲಿಯೇ ಮುನ್ನಡೆಯುವಂಥದು. ಆದರೆ ಕೊನೆಯಲ್ಲಿ ಶಿವ ಕಾಣಿಸಿಕೊಂಡು ನಂಬಿದ ಭಕ್ತನನ್ನು ಹರಸುವುದು ಪುರಾಣಪ್ರಭಾವ ಇರಬಹುದು. 'ಸಂಗ್ಯಾ-ಬಾಳ್ಯಾ' ಸಣ್ಣಾಟದಲ್ಲಿ ಅನೀತಿ ಮತ್ತು ಅದರ ಪರಿಣಾಮ ಪ್ರಮುಖವಾಗಿ

ವಿವರಣೆಗೊಂಡಿದೆ. 'ಕಟ್ಟಿ-ಚೆನ್ನ' ಮೇಲುವರ್ಗದವರನ್ನು ಎದುರಿಸಿದ ಸಾಮಾನ್ಯ ತರುಣನೊಬ್ಬನ ಕಥೆಯನ್ನು ಹೇಳುತ್ತದೆ.

ಕೆಲವು ಸಣ್ಣಾಟಗಳನ್ನು ವಿವರಿಸುತ್ತೇನೆ. ಸಣ್ಣಾಟಗಳ ಬಗೆಗಳು ಇದರಿಂದ ತಿಳಿಯುತ್ತದೆ.

ರಾಧಾನಾಟ

ರಾಧಾನಾಟವು ಬಸರಗಿ ಕುಂಬಾರನು ಬರೆದದ್ದು. ಇಲ್ಲಿ ಬರುವ ರಾಧೆ ಮತ್ತು ಗೋಪಾಲರು ಮೂಲತಹ ಪುರಾಣವಲಯದವರೇ ಆದರೆ, ಆಟದ ಕೊನೆಗೆ ಇವರು ಪೂರಾ ಸಾಮಾಜಿಕ ವ್ಯಕ್ತಿಗಳೇ ಎನಿಸುತ್ತಾರೆ.

ಆಟದ ಆರಂಭದಲ್ಲಿ ಗೊಲ್ಲತಿ ಹಾಲು-ಮೊಸರು ತೆಗೆದುಕೊಂಡು ಬರುತ್ತಾಳೆ. ತಾನು ಯಾರು? ತನ್ನ ವ್ಯಾಪಾರವೆಂಥದು ಮುಂತಾದ ಮಾತುಗಳನ್ನು ದೂತಿಯೊಂದಿಗೆ ಆಡುತ್ತಾಳೆ. ದೂತಿಯು ಹೇಳಿದಂತೆ ಇವಳು ಗೋಕುಲಕ್ಕೆ ಹಾಲು ಮಾರಲು ಹೋದರೆ ಗೋಪಾಲ ಅವಳನ್ನು ಸುಂಕ ಕೊಡುವಂತೆ ಒತ್ತಾಯಿಸಿದ. ಇವಳು ಸುಂಕ ಕೊಡಲಾರೆನೆಂದು ಎಷ್ಟೇ ಪರಿಪರಿಯಿಂದ ಕೇಳಿಕೊಂಡರೂ ಅವನು ಬಿಡಲಿಲ್ಲ. ಗೊಲ್ಲತಿ ಮುಂದಿನ ಜನ್ಮದಲ್ಲಿ ತಾನು ಸುಂಕ ತೀರಿಸುವುದಾಗಿ ಮಾತು ಕೊಡುತ್ತಾಳೆ. ಮುಂದಿನ ಜನ್ಮದಲ್ಲಿ ಗೋಪಾಲ ಗಲ್ಫೋಜಿಯಾಗಿ ಹುಟ್ಟಿ ಬರಬೇಕು. ತಾನು ಚಿಮಣಾ ಆಗಿ ಬರಬೇಕು. ದೂತಿ ಸಖಾರಾಮ ತಾತ್ಯಾ ಆಗಿ ಜನ್ಮ ತಾಳಿ ಬರಬೇಕು ಎನ್ನುತ್ತಾಳೆ. ಇಲ್ಲಿಗೆ ರಾಧಾನಾಟದ ಮೊದಲಭಾಗ ಮುಗಿಯುತ್ತದೆ. ಇಲ್ಲಿ ಬರುವ ಗೊಲ್ಲತಿ ಯಾರೂ ಅಲ್ಲ ಇವಳೇ ರಾಧಾ. ಇವಳು ರಾಧಾ ಎಂದು ಕರೆಯಿಸಿಕೊಳ್ಳುವ ಬದಲು ಗೊಲ್ಲತಿಯೆಂದೇ ಕರೆಯಿಸಿಕೊಳ್ಳುತ್ತಾಳೆ.

ಆಟದ ಎರಡನೆಯ ಭಾಗದಲ್ಲಿ ಗೊಲ್ಲತಿಯೆಂದಂತೆ ಗೋಪಾಲ ಗಲ್ಫೋಜಿಯಾಗಿ, ದೂತಿ ಗಲ್ಫೋಜಿಯ ಸ್ನೇಹಿತ ಸಖಾರಾಮ ತಾತ್ಯಾ ಆಗಿ, ಗೊಲ್ಲತಿ ಚಿಮಣಾ ಆಗಿ ಜನ್ಮ ತಾಳಿ ಬರುತ್ತಾರೆ. ಒಂದು ದಿನ ಗಲ್ಫೋಜಿ ಓಣಿಯಲ್ಲಿ ಸಾಗಿದ ಚಿಮಣಾಳನ್ನು ಕಂಡ. ಅವಳ ಅಂದಚಂದಕ್ಕೆ ಮೋಹಗೊಂಡ. ಗಲ್ಫೋಜಿಗೆ ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂಬ ಹಂಬಲ ಅತಿಯಾಯಿತು. ಸಖಾರಾಮ, ತಾತ್ಯಾನನ್ನು ಅವಳನ್ನು ಒಪ್ಪಿಸಲು ಕಳಿಸುತ್ತಾನೆ. ಅಲ್ಲಿಗೆ



ಕೃಷ್ಣ ರಾಧೆಯನ್ನು ಸುಂಕ ಕೇಳುತ್ತಿರುವುದು

ಹೋದ ಸಖಾರಾಮ ಅವಳಿಂದ ಬಯ್ಯಿಸಿಕೊಂಡು ಹಿಂದಿರುಗಬೇಕಾಯಿತು. ಈ ಮೂಲಕ ತನಗೆ-ತನ್ನ ಸ್ನೇಹಿತನಿಗೆ ಅಪಮಾನವಾದರೂ ಗಲ್ಫೋಜಿಗೆ ಅವಳ ಮೇಲಿನ ಮೋಹ ಕಡಿಮೆಯಾಗಲಿಲ್ಲ. ಗಲ್ಫೋಜಿ ಅವಳ ರೂಪವನ್ನು ಹೊಗಳುತ್ತಾ ತನ್ನ ಪ್ರೇಮ ಮೋಹಗಳನ್ನು ಸ್ಪಷ್ಟಪಡಿಸುತ್ತಾನೆ. ಆದರೆ ಚಿಮಣಾ ಅವನ ಬೇಡಿಕೆಯನ್ನು ಮನ್ನಿಸುವುದಿಲ್ಲ. ಅವನಿಗೆ ಉಪದೇಶ ನೀಡುತ್ತಾಳೆ. ಬೇರೆ ಹೆಂಗಸರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂದು ಬೋಧಿಸುತ್ತಾಳೆ. ಗಲ್ಫೋಜಿ ತನ್ನ ಪ್ರೇಮವನ್ನು ಎಷ್ಟೇ ಪರಿಯಾಗಿ ತೋಡಿಕೊಂಡರೂ ಚಿಮಣಾ ಜಪ್ಪೆನ್ನಲಿಲ್ಲ. ಗಲ್ಫೋಜಿ ಬರಿಗೈಯಿಂದ ಮರಳಬೇಕಾಯಿತು.

ಚಿಮಣಾಳಿಂದ ತಿರಸ್ಕೃತನಾದ ಗಲ್ಫೋಜಿಯಲ್ಲಿ ಅವಳ ಬಗೆಗೆ ಯಾವುದೇ ಬಗೆಯ ತಿರಸ್ಕಾರದ ಭಾವ ಹುಟ್ಟುವುದಿಲ್ಲ. ಬದಲಾಗಿ ನಿರಾಶೆಯ ಭಾವ ಬೆಳೆಯುತ್ತ ಹೋಗುತ್ತದೆ. ಹೀಗೇ ದಿನಗಳೆದು ಚಿಮಣಾಗಳ ಬಗೆಗೆ ಮೂಡಿದ ನಿರಾಶೆಯಿಂದಾಗಿ ಬರಬರುತ್ತ

ಜೀವನದಲ್ಲಿಯೇ ಅವನಿಗೆ ವೈರಾಗ್ಯ ಮೂಡುವಂತಾಗುತ್ತದೆ. ಹೀಗಾಗಿ ಮುಂದೊಂದು ದಿನ ಸನ್ಯಾಸಿಯಾಗಿ ದೇಶಾಂತರ ಹೋಗಿಬಿಡುತ್ತಾನೆ.

ಗಲ್ಫೋಜಿ ದೇಶಾಂತರ ಹೋದ ಸುದ್ದಿ ಚಿಮಣಾಳನ್ನು ತಲ್ಲಣಗೊಳಿಸುತ್ತದೆ. ಅವನ ಕರುಣಾಜನಕ ಭಾವ ಚಿಮಣಾಳನ್ನು ಕಾಡುತ್ತ ಪಶ್ಚಾತ್ತಾಪ ಪಡುತ್ತಾಳೆ. ವಿಚಿತ್ರವೆಂಬಂತೆ ಅವಳಿಗೆ ಅವನ ಮೇಲೆ ಹಂಬಲ ತೀವ್ರವಾಗಿ ಹುಡುಕಿ ಕೊನೆಗೊಂದು ದಿನ ಅವನನ್ನು ಭೆಟ್ಟಿಯಾಗುತ್ತಾಳೆ. ಈಗ ತನ್ನನ್ನು ಒಪ್ಪಿಕೊಳ್ಳುವಂತೆ ಬೇಡಿಕೊಳ್ಳುವ ಸರದಿ ಚಿಮಣಾಳದು. ಅವನು ವೈರಾಗ್ಯವನ್ನು ಸಾಧಿಸಿದ್ದಾನೆ. ಅವಳ ಮೇಲಿನ ಹಂಬಲವನ್ನೆಲ್ಲ ಕಳೆದುಕೊಂಡಿದ್ದಾನೆ. ಹೀಗಾಗಿ ಒಪ್ಪಲು ಸಿದ್ಧನಿಲ್ಲ. ಒಲಿದು ಬಂದವಳನ್ನು ಕೈಬಿಡುವುದೇ ಎಂಬುದು ಚಿಮಣಾಳ ವಾದವಾದರೆ, ಸನ್ಯಾಸಿಯನ್ನು ಒತ್ತಾಯಪಡಿಸುವುದು ಯಾವ ನ್ಯಾಯ ಎಂಬುದು ಗಲ್ಫೋಜಿಯ ವಾದ. ನಾನಾ ಬಗೆಯ ವಾದವಿವಾದಗಳಾದ ಮೇಲೆ ಗಲ್ಫೋಜಿಯ ಮನಸ್ಸು ತಿಳಿಯಾಗುತ್ತದೆ. ಕೊನೆಗೆ ಗಲ್ಫೋಜಿ ಮತ್ತು ಚಿಮಣಾ ಒಂದಾಗುವ ಸನ್ನಿವೇಶದೊಂದಿಗೆ ಆಟ ಮುಕ್ತಾಯಗೊಳ್ಳುತ್ತದೆ.

ತಳೇವಾಡ ನಬಿ ಎಂಬುವನು ರಾಧಾನಾಟಕ್ಕೆ ಹೊಸದೊಂದು ತಿರುವುಕೊಟ್ಟಿದ್ದಾನೆ. ಅಲ್ಲಿ ಶಕ್ತಿಯ ಮೇಲ್ಮೆಯನ್ನು ಸಾರುತ್ತಾನೆ. ನಬಿಯ ಆಟದಲ್ಲಿ ಬರುವ ಚಿಮಣಾ ಸಾಂಸಾರಿಕ ಮನಸ್ಸನ್ನು ಹೊಂದಿದವಳೇ ಅಲ್ಲ. ಅವಳು ಬದುಕಿನ ನಶ್ವರತೆಯನ್ನು ಹೇಳುತ್ತ ವೈರಾಗ್ಯವನ್ನೇ ಹೇಳುತ್ತಾಳೆ. ಅದೇರೀತಿ ಗಲ್ಫೋಜಿಗೆ ಬೋಧಿಸಿ ಅವನ ಮನಸ್ಸನ್ನು ಬದಲಿಸಿ ವೈರಾಗ್ಯದ ಹಾದಿ ಹಿಡಿಸುತ್ತಾಳೆ.

ಮೇಲೆ ಉಲ್ಲೇಖಿಸಿದಂತೆ ರಾಧಾನಾಟದ ಈ ಎರಡೂ ರೂಪಗಳು ಒಂದು ಕಾಲಕ್ಕೆ ಜಾನಪದರಿಗೆ ಮನರಂಜನೆ ನೀಡಿ ತಣಿಸಿದವು.

ರೂಪಸಿಂಗ

ಈ ಆಟವನ್ನು ಯಾರು ಬರೆದರೋ ಇದುವರೆಗೆ ತಿಳಿದಿಲ್ಲ. ಈ ಆಟಕ್ಕೆ ರೂಪಸೇನ ಎಂಬುದು ಇನ್ನೊಂದು ಹೆಸರು. ಈಗ ಇದರ ಪ್ರದರ್ಶನ ನಿಂತಿದ್ದರೂ ಒಂದು ಕಾಲಕ್ಕೆ ಉತ್ತರ ಕರ್ನಾಟಕದಲ್ಲಿ ಇದು ಬಹಳ ಹೆಸರಾಗಿತ್ತು.

ರಾಮಸಿಂಗ ಒಬ್ಬ ಸಿಪಾಯಿ. ಜಯವಂತಿ ರಾಮಸಿಂಗನ ಹೆಂಡತಿ. ರೂಪಸಿಂಗ ಇವರಿಬ್ಬರ ಮಗ. ಒಂದು ದಿನ ಯುದ್ಧಕ್ಕೆ ಬರಬೇಕೆಂಬ ಕರೆಯನ್ನು ಹಿಂಬಾಲಿಸಿ ರಾಮಸಿಂಗ ಪ್ರಯಾಣ ಬೆಳೆಸಿದ. ಅವನು ಆ ಕಡೆಗೆ ಹೋದ ಮೇಲೆ ಜಯವಂತಿ, ಮಗ ರೂಪಸಿಂಗ ಮತ್ತು ದೂತಿಯೊಂದಿಗೆ ದಿನಗಳೆಯತೊಡಗಿದಳು. ಒಂದು ದಿನ ಜಯವಂತಿ ದೂತಿಯೊಂದಿಗೆ ಸರಸವಾಡುತ್ತಿದ್ದಳು. ದೂರದಿಂದ ನೋಡಿ ಪರಪುರುಷನೆಂದು ತಪ್ಪಾಗಿ ಭ್ರಮಿಸಿದ ರೂಪಸಿಂಗ. ಅವಳ ಮೇಲೆ ಅನೈತಿಕತೆಯ ಅಪವಾದ ಹೊರಿಸಿದ. ಮನಬಂದಂತೆ ಜರಿಯುತ್ತಾನೆ. ತರುವಾಯ ಜಯವಂತಿ, ಇರುವ ನಿಜಸಂಗತಿಯನ್ನು ವಿವರಿಸಿ ತನ್ನೊಂದಿಗೆ ಸರಸವಾಡುತ್ತಿದ್ದ ವ್ಯಕ್ತಿ ವಿಟಪುರುಷನಲ್ಲ ದೂತಿಯೆಂಬುದನ್ನು ತಿಳಿಹೇಳುತ್ತಾಳೆ. ಪತಿವ್ರತೆಯಾದ ತನ್ನ ತಾಯಿಯನ್ನು ತಾನು ತಪ್ಪಾಗಿ ತಿಳಿದುಕೊಂಡದ್ದಕ್ಕೆ ಬೇಸಪರಟ್ಟ ರೂಪಸಿಂಗ. ವೈರಾಗ್ಯ ತಾಳಿ ತಪಸ್ಸಿಗೆ ಹೊರಟು ಹೋಗುತ್ತಾನೆ.

ಅತ್ತ, ಮನೆಯಿಂದ ಹೋಗಿದ್ದ ರಾಮಸಿಂಗ ಕಮಲಾಕ್ಷಿ ಎಂಬುವಳಲ್ಲಿ ಮೋಹಗೊಂಡು ಅವಳೊಂದಿಗೆ ಇರತೊಡಗಿದ. ಕಮಲಾಕ್ಷಿಯ ಗಂಡ ನಪುಂಸಕನಾದದ್ದರಿಂದ ರಾಮಸಿಂಗ ಮತ್ತು ಕಮಲಾಕ್ಷಿಯರ ಪ್ರಣಯ ಇನ್ನೂ ಹೆಚ್ಚಿತು. ತನ್ನ ಮನೆ-ಹೆಂಡತಿ-ಮಗ ಎಲ್ಲವನ್ನು ಮರೆಸುವಷ್ಟರ ಮಟ್ಟಿಗೆ ಕಮಲಾಕ್ಷಿಯ ಮೋಹಪಾಶ ರಾಮಸಿಂಗನನ್ನು ಬಂಧಿಸಿತು. ಒಂದು ದಿನ ರಾಮಸಿಂಗನಿಗೆ ತನ್ನ ಹೆಂಡತಿ ಮತ್ತು ಮಗನ ನೆನಪಾಗಿ ಕಳವಳಿಸ ತೊಡಗಿದನು. ಅವನ ದುಃಖಕ್ಕೆ ಕಾರಣವೇನೆಂಬುದು ಮೊದಲು ಕಮಲಾಕ್ಷಿಗೆ ತಿಳಿಯಲೇ ಇಲ್ಲ. ಒತ್ತಾಯ ಮಾಡಿ ಕೇಳಿದಾಗ ತನ್ನ ಸಂಸಾರದ ಕಥೆಯನ್ನೆಲ್ಲ ರಾಮಸಿಂಗ ಅವಳೆದುರು ಹೇಳಿದ. ರಾಮಸಿಂಗನಲ್ಲಿ ಹುಟ್ಟಿದ ಈ ನೆನಪು ಅವನನ್ನು ತನ್ನಿಂದ ಅಗಲಿಸಬಹುದೆಂಬ ಸಂಶಯ ಕಮಲಾಕ್ಷಿಯನ್ನು ಕಾಡತೊಡಗಿತು. ಅದಕ್ಕನುಗುಣವಾಗಿ ರಾಮಸಿಂಗ ತಾನು ತನ್ನ ಊರಿಗೆ ಹಿಂದಿರುಗಿ ಹೋಗುತ್ತೇನೆಂದು ಹಟಮಾಡತೊಡಗಿದ. ಕೋಪಗೊಂಡ ಕಮಲಾಕ್ಷಿ ಆ ಕ್ಷಣದಲ್ಲಿ ಹೇಗೋ ಮನಸ್ಸನ್ನು ಹತೋಟಿಗೆ ತಂದುಕೊಂಡಳು. ಅಂದೇ ರಾತ್ರಿ ರಾಮಸಿಂಗ ಮಲಗಿಕೊಂಡಿರುವಾಗ ಅವನನ್ನು ಇರಿದುಕೊಂದು ಎಲ್ಲಿಗೋ ಹೊರಟುಹೋಗಿಬಿಟ್ಟಳು.

ಬಹಳ ದಿನಗಳಿಂದ ಗಂಡನ ಸುಳಿವೇ ಇಲ್ಲದೇ ಜಯವಂತಿ ಕಳವಳಗೊಂಡಳು. ದಾರಿಕಾದು ಬೇಸತ್ತು ತಾನೇ ಹುಡುಕುತ್ತ ಹೊರಟಳು. ಕಮಲಾಕ್ಷಿಯೊಂದಿಗೆ ಗಂಡನಿದ್ದ ಪಟ್ಟಣಕ್ಕೆಬಂದಳು. ಅಲ್ಲಿ ಹುಡುಕುತ್ತ ಹುಡುಕುತ್ತ ಅಲೆದಳು. ಅಕಸ್ಮಾತ್ತಾಗಿ ಗಂಡನ ಕೊಲೆಯಾದಂದೇ ಅಲ್ಲಿಗೆ ತಲುಪಿದಳು. ಜಯವಂತಿಯ ದುಃಖಕ್ಕೆ ಮೇರೆಯಿಲ್ಲ. ಇದೇ ಹೊತ್ತಿಗೆ



. ರೂಪಸಿಂಗ್ ಆಟದ ಕಡೆಯ ದೃಶ್ಯ

ತಪಸ್ಸಿಗೆ ಹೋಗಿದ್ದ ಮಗನು ಇಲ್ಲಿಗೆ ಬಂದನು. ಇದುವರೆಗೆ ಸಾಧನೆ ಮಾಡಿ ಶಕ್ತಿಯನ್ನು ಗಳಿಸಿದ್ದ ರೂಪಸಿಂಗ ತನ್ನ ತಂದೆಯನ್ನು ಬದುಕಿಸಿಕೊಳ್ಳಲು ಶಿವನ ನಾಮಸ್ಮರಣೆಯನ್ನು ಮಾಡತೊಡಗಿದನು. ಜಯವಂತಿಯ ದುಃಖ ಮತ್ತು ರೂಪಸಿಂಗನ ಭಕ್ತಿ ಎರಡಕ್ಕೂ ಕನಿಕರಿಸಿ ಶಿವನು ಕಾಣಿಸಿಕೊಂಡು, ಸತ್ತು ಹೋದ ರಾಮಸಿಂಗನನ್ನು ಬದುಕಿಸಿದನು. ಹೀಗೆ ದುರಂತಮಯವಾಗಿದ್ದ ಒಂದು ಸಂಸಾರದ ಕಥೆ ಶಿವನ ದರ್ಶನದಿಂದಾಗಿ ಆಟದ ಕೊನೆಗೆ ಮಂಗಳಮಯವಾಗುತ್ತದೆ.

ಸಂಗ್ಯಾ-ಬಾಳ್ಯಾ

ಸಂಗ್ಯಾ-ಬಾಳ್ಯಾ ಆಟವನ್ನು ಬರೆದವನು ಬೈಲವಾಡದ ಪತ್ತಾರ. ಉತ್ತರ ಕರ್ನಾಟಕದಲ್ಲಿ ಇದು ಜನಪ್ರಿಯ. ಅದರಲ್ಲೂ ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ ತುಂಬ ಜನಾನುರಾಗವನ್ನು ಗಳಿಸಿಕೊಂಡ ಬಯಲಾಟವಿದು. ಸಂಗ್ಯಾ-ಬಾಳ್ಯಾದಷ್ಟು ಪ್ರಯೋಗಗಳನ್ನು ಇತರ ಯಾವ ಸಣ್ಣಾಟಗಳೂ ಕಂಡಂತೆ ತೋರುವುದಿಲ್ಲ. ಇಂದಿಗೂ ಸಂಗ್ಯಾ-ಬಾಳ್ಯಾದ ಪ್ರಯೋಗಗಳು ಈ ಪ್ರದೇಶದ ಹಳ್ಳಿಗಳಲ್ಲಿ ಹೆಚ್ಚಾಗಿ ದೊರೆಯುತ್ತವೆ.

ಬೈಲಹೊಂಗಲದ ಸಂಗ್ಯಾ ಈ ಆಟದ ನಾಯಕ. ಬಾಳ್ಯಾ ಸಂಗ್ಯಾನ ಸ್ನೇಹಿತ. ಬಹಳ ದಿನಗಳ ಕಾಲ ಅಗಲಿದ ಗೆಳೆಯರು ಕೂಡಿಕೊಳ್ಳುವ ಸಂತೋಷದೊಂದಿಗೆ ಆಟ ಆರಂಭಗೊಳ್ಳುತ್ತದೆ. ಸಿರಿವಂತನಾದ ಸಂಗ್ಯಾ ಭೇಟಿಯಾದ ಬಾಳ್ಯಾನಿಗೆ ಮಾರ್ವಾಡಿ ಅಂಗಡಿಯಲ್ಲಿ ತನ್ನಂಥದ್ದೇ ವೇಷಭೂಷಣ ಕೊಡಿಸಿ ಕೊಡುತ್ತಾನೆ. ಆದರೆ ಕಿಸೆಯಲ್ಲಿ ಹಣವಿಲ್ಲದ್ದರಿಂದ ಸಂಗ್ಯಾ ಹಣತರಲು ಮನೆಗೆ ಹೋದ. ಅವನು ಬರುವವರೆಗೆ ಅಂಗಡಿಯಲ್ಲಿದ್ದ ಬಾಳ್ಯ ಮಾರ್ವಾಡಿಯ ಕಣ್ಣು ತಪ್ಪಿಸಿ ಕಳ್ಳತನ ಮಾಡಲು ಹೋಗಿ ಸಿಕ್ಕಿಕೊಳ್ಳುತ್ತಾನೆ. ಈ ಸನ್ನಿವೇಶ ನಾಟಕೀಯವೆನ್ನಿಸುವಂತೆಯೇ ಬಾಳ್ಯಾನ ಗುಣವನ್ನು ಸ್ಪಷ್ಟಗೊಳಿಸುತ್ತದೆ. ಸ್ನೇಹಿತರು ಬಹಳ ದಿನಗಳ ಮೇಲೆ ಕೂಡಿದ ಹುರುಪಿನಲ್ಲಿ ಪಗಡಿಯಾಡಲು ಮಡ್ಡಿಬಸವಣ್ಣನ ಗುಡಿಯ ಕಡೆಗೆ ಹೋಗುತ್ತಾರೆ.

ಇದೇ ಊರಲ್ಲಿ ಈರ್ಯಾ, ಇರಪಾಕ್ಷಿ, ಬಸವಂತ ಎಂಬ ಮೂವರು ಅಣ್ಣ ತಮ್ಮಂದಿರು. ಈರ್ಯಾ ಹಿರಿಯವ, ಅವನ ಹೆಂಡತಿ ಗಂಗಿ. ಈರ್ಯಾ ಸತತವಾಗಿ ತನ್ನ ವ್ಯಾಪಾರದ ಕಡೆಗೇ ಗಮನ ನೀಡುವವನು. ಒಂದು ದಿನ ಮುತ್ತಿನ ವ್ಯಾಪಾರಕ್ಕೆಂದು ಬಳ್ಳಾರಿಯ ಕಡೆಗೆ ಹೊರಡುತ್ತಾನೆ. ಗಂಗಿ, ಹೋಗುವುದು ಬೇಡವೆಂದು ಒತ್ತಾಯಪಡಿಸಿದರೂ ಈರ್ಯಾ

ನಿಲ್ಲುವುದಿಲ್ಲ. ಸಮಾಧಾನಪಡಿಸಿ ಪ್ರಯಾಣ ಬೆಳೆಸುತ್ತಾನೆ. ಮಡ್ಡಿ ಬಸವಣ್ಣನ ಜಾತ್ರೆಯೆಂದು ಗುಡಿಗೆ ಹೊರಟ ಹೊತ್ತಿನಲ್ಲಿ ಅವಳ ಕೊರಳಲ್ಲಿಯ ಸರಿಗೆ ಕಳಚಿ ಬೀಳುತ್ತದೆ. ಅಲಂಕರಿಸಿಕೊಂಡಿದ್ದ ಗಂಗಿಯನ್ನು ಕಂಡು ಅವಳನ್ನು ಹಿಂಬಾಲಿಸುತ್ತಿದ್ದ ಸಂಗ್ಯಾ ಅವಳಿಗೆ ಗೊತ್ತಿಲ್ಲದಂತೆ ಅದನ್ನು ಎತ್ತಿಕೊಂಡ. ಗಂಗಿಯ ರೂಪ ಯೌವ್ವನಗಳಿಗೆ ಮಾರು ಹೋಗಿದ್ದ ಸಂಗ್ಯಾ, ಗಂಗಿಯೊಂದಿಗೆ ಸಂಪರ್ಕ ಪಡೆಯಲು ಹಾತೊರೆಯುತ್ತಾನೆ. ಸಿಕ್ಕ ಸರಿಗೆ ಕೊಡುವ ನೆಪದಿಂದ ಧೈರ್ಯ ಮಾಡಿ ಗಂಗೆಯ ಮುಂದೆ ತನ್ನ ಮನಸ್ಸಿನ ಹಂಬಲವನ್ನು ಹೇಳಿದಾಗ ಗಂಗಿ ಅವನನ್ನು ಜರಿದು ಉಪದೇಶ ಮಾಡುತ್ತಾಳೆ. ಸಂಗ್ಯಾ ಇಷ್ಟಕ್ಕೇ ಬಿಡಲಿಲ್ಲ. ತನ್ನ ಸ್ನೇಹಿತ ಬಾಳ್ಯನನ್ನು ಗಂಗಿಯಲ್ಲಿಗೆ ಕಳಿಸುತ್ತಾನೆ. ಗಂಗಿಯ ಮನೆಗೆ ಬಂದ ಬಾಳ್ಯಾ ಸಂಗ್ಯಾರ ಗುಣವರ್ಣನೆ ಮಾಡಿ ಅವಳಿಗಾಗಿ ಅವನು ಹಂಬಲಿಸುತ್ತಿರುವ ರೀತಿಯನ್ನು ವಿವರಿಸುತ್ತಾನೆ. ಈಗಲೂ ಗಂಗಿ ಸಂಗ್ಯಾನ ಕಡೆಗೆ ಮನಸ್ಸು ಹರಿಯಗೊಡಲಿಲ್ಲ; ಬಾಳ್ಯಾ-ಸಂಗ್ಯಾನಿಗಾಗಿ ಗಂಗಿಯನ್ನು ಒಲಿಸಿಕೊಳ್ಳಲು ಹೋದವನು ನಿರಾಶೆಯನ್ನೇ ಹೊತ್ತು ತಂದ.

ಸಂಗ್ಯಾನ ವಿರಹವೇದನೆ ಹೆಚ್ಚುತ್ತಲೇ ಹೋಯಿತು. ಗಂಗಿಯನ್ನು ಒಲಿಸಿಕೊಳ್ಳುವುದು ತನ್ನಿಂದಾಗಲಿಲ್ಲ; ಅವಳನ್ನು ಒಲಿಸಿಕೊಡುವುದು ಬಾಳ್ಯಾನಿಗಾಗಲಿಲ್ಲ. ಸಂಗ್ಯಾ ತನ್ನ ಸೋದರತ್ತೆಯೆನಿಸಿದ ಪರಮ್ಮಳನ್ನು ಸಹಾಯಕ್ಕೆ ಕರೆಯುತ್ತಾನೆ. ಪರಮ್ಮ ಸಂಗ್ಯಾನ ರೂಪ, ಶ್ರೀಮಂತಿಕೆ ಏನು ಹೇಳಿದರೂ ಗಂಗಿ ಒಲಿಯುವಂತೆ ಕಾಣಲಿಲ್ಲ. ಈಗ ಪರಮ್ಮ ಗಂಗೆಯ ಮೇಲೆ ಅಪವಾದ ಬರುವಂಥ ಬೇರೊಂದು ಕುತಂತ್ರವನ್ನೇ ರಚಿಸುತ್ತಾಳೆ. ಗಂಗಿಗೆ ಗೊತ್ತಿಲ್ಲದಂತೆ ಸಂಗ್ಯಾನ ಪಟಕಾವನ್ನು ಅವಳ ಹಾಸಿಗೆಯಲ್ಲಿ ಇಟ್ಟು ಈ ಪಟಕಾ ಇಲ್ಲಿಗೆ ಹೇಗೆ ಬಂತು ಎಂದು ಕೇಳುತ್ತಾಳೆ. ಸಂಗ್ಯನೊಂದಿಗಿರುವ ನಿನ್ನ ಈ ಸಂಬಂಧವನ್ನು ಊರ ಜನರಿಗೆಲ್ಲ ತಿಳಿಸುತ್ತೇನೆಂದು ಪರಮ್ಮ ಹೆದರಿಸುತ್ತಾಳೆ. ಈ ಆಟಕ್ಕೆ ಬೆದರಿದ ಗಂಗಿ ಪರಮ್ಮನ ಸಲಹೆಯಂತೆ ಸಂಗ್ಯಾನಿಗೆ ಒಳಗಾಗುತ್ತಾಳೆ. ಹೀಗೆ ಆರಂಭವಾದ ಸಂಗ್ಯಾ ಮತ್ತು ಗಂಗಿಯ ಪ್ರಣಯ ಮುಂದುವರಿಯುತ್ತದೆ. ಬಳ್ಳಾರಿಯ ಕಡೆಗೆ ಮುತ್ತಿನ ವ್ಯಾಪಾರಕ್ಕೆಂದು ಹೋಗಿದ್ದ ಈರ್ಯಾ ಊರಲ್ಲಿ ಕಾಲಿಡುತ್ತಿದ್ದಂತೆಯೇ ಸಂಗ್ಯಾ ಗಂಗಿಯ ಪ್ರಣಯ ಸಂಬಂಧವನ್ನು ಜನರಿಂದ ಕೇಳಬೇಕಾಯಿತು. ದಾರಿಯುದ್ದಕ್ಕು ಜನರಾಡುತ್ತಿದ್ದ ಗುಸುಗುಸು ಈರ್ಯಾನನ್ನು ಕಂಗೆಡಿಸಿತು. ಇದೇ ಆವೇಶದಲ್ಲಿ ಮನೆಗೆ ಬಂದ. ಮುಚ್ಚಿದ ಮನೆಯಬಾಗಿಲು ಸಂಶಯವನ್ನು ತಂದಿತು. ಬಾಗಿಲು ತಟ್ಟಿದ. ಕತ್ತಲಲ್ಲಿ ಗಂಗಿ ಬಾಗಿಲು ತೆರೆಯುತ್ತಿದ್ದಂತೆಯೇ ಸಂಗ್ಯಾ ಜಿಗಿದು ಪಾರಾದನು.

ಹೀಗೆ ತನ್ನೆದುರೇ ಅನೈತಿಕ ಪ್ರಣಯದಲ್ಲಿ ಸಿಕ್ಕಿ ಹಾಕಿಕೊಂಡ ಗಂಗಿಯ ಮೈಮೇಲಿನ ಆಭರಣಗಳನ್ನೆಲ್ಲ ಕಳಚಿಕೊಂಡು ಈರ್ಯಾ ಅವಳ ತೌರುಮನೆ ಬೈಲುವಾಡಕ್ಕೆ ಅಟ್ಟಿಬಿಟ್ಟನು.

ತಮ್ಮ ಮನೆತನದ ಮರ್ಯಾದೆಯನ್ನು ಕಳೆದ ಸಂಗ್ಯನನ್ನು ಮುಗಿಸಿಬಿಡಲು ಈರ್ಯಾ, ಇರಪಾಕ್ಷಿ, ಬಸವಂತ ಸಂಚುಹಾಕಿದರು. ಸಂಗ್ಯಾ ಅಷ್ಟು ಸುಲಭವಾಗಿ ತಮಗೆ ಸಿಗುವುದಿಲ್ಲವೆಂದರಿತ ಇವರು ಬಾಳ್ಯಾನಿಗೆ ಹಣದಾಸೆ ತೋರಿಸಿ ಸಂಗ್ಯಾನನ್ನು ಹಿಡಿದುಕೊಡುವಂತೆ ಒತ್ತಾಯಿಸಿ ಒಪ್ಪಿಸಿದರು.

ತನ್ನ ಗಂಡ-ಮೈದುನರು ಯೋಜಿಸಿದ ಸಂಗ್ಯಾನ ಕೊಲೆಯ ಸಂಚನ್ನು ಹೇಗೋ ತಿಳಿದಳು ಗಂಗಿ. ಸಂಗ್ಯಾನಿಗೆ ಪತ್ರ ಬರೆದು ಮನೆಯಿಂದ ಕದಲಬಾರದೆಂದು ಸೂಚಿಸಿದಳು. ಈ ಪತ್ರ ಹೇಗೋ ಬಾಳ್ಯಾನ ಕೈಗೆ ತಲುಪಿತು. ಬಾಳ್ಯಾನೊಂದಿಗೆ ಬರಲು ಸಂಗ್ಯಾನಿಗೆ ಸೂಚಿಸುವಂತೆ ಗಂಗಿಯ ಹೆಸರಿನಲ್ಲಿ ಪತ್ರ ಬರೆಯುತ್ತಾನೆ. ಬಾಳ್ಯಾ ಈ ಪತ್ರವನ್ನು ಸಂಗ್ಯಾನಿಗೆ ತಲುಪಿಸಿದ. ಸಂಗ್ಯಾ ಹರ್ಷದೊಂದಿಗೆ ಗಂಗಿಯ ಕಡೆಗೆ ಹೊರಡುತ್ತಾನೆ. ಗಂಗಿಯನ್ನು ಭೆಟ್ಟಿಯಾಗಿ ಹಿಂದಿರುಗುವಾಗ ಅವನನ್ನು ಈರ್ಯಾ, ಇರಪಾಕ್ಷಿ, ಬಸವಂತರು ಕೊಲೆ ಮಾಡಿ ಬಿಡುತ್ತಾರೆ. ಬಾಳ್ಯಾನನ್ನು ಅವಮಾನಿಸಲು ಬೈಲಹೊಂಗಲದಲ್ಲಿ ಅವನನ್ನು ಮೆರೆಸುತ್ತಾರೆ.

ಕಟ್ಟಿಚೆನ್ನ

ಕಟ್ಟಿಚೆನ್ನ ಕೃತಿಯಲ್ಲಿ 'ದುರ್ವೇಶಪುರದ ಪತ್ರೇಶ್ವರ' ಎಂಬ ಹೆಸರೇನೋ ಇದೆ. ಆದರೆ, ಇದು ದೇವರ ಹೆಸರಾಗಿರಬೇಕು. ಕವಿಯ ಹೆಸರಲ್ಲ. ಸ್ವಾಭಿಮಾನವನ್ನುಳಿಸಿಕೊಳ್ಳಲು ಗೌಡನೊಬ್ಬನನ್ನು ಎದುರು ಹಾಕಿಕೊಂಡು ಕ್ರಮೇಣ ಬ್ರಿಟಿಷ್ ಪೋಲೀಸ್ ಅಧಿಕಾರಿಗಳಿಗೆ ತಲೆನೋವಾದ ತರುಣನೊಬ್ಬನ ಕಥೆ ಇಲ್ಲಿದೆ. ಆ ತರುಣನೇ ಕಟ್ಟಿಚೆನ್ನ.

ಕಟ್ಟಿಚೆನ್ನ ಸೊಪ್ಪಡ್ಲದವನು. ಗದಿಗೆಪ್ಪ ಇವನ ಅಣ್ಣ. ಚಿನ್ನವ್ವ ಇವನ ತಂಗಿ. ಇವಳನ್ನು ತ್ಯಾನಗಟ್ಟಿಗೆ ಕೊಟ್ಟಿತ್ತು. ನಾಗರ ಪಂಚಮಿಗೆ ಚಿನ್ನವ್ವನನ್ನು ಕರೆಯಲು ಗದಿಗೆಪ್ಪ ತಮ್ಮ ಚೆನ್ನನನ್ನು ಕಳಿಸುವುದರೊಂದಿಗೆ ಆಟಕ್ಕೆ ಮೊದಲಾಗುತ್ತದೆ. ಚೆನ್ನ ಎತ್ತು ಹತ್ತಿಕೊಂಡು ತಂಗಿಯನ್ನು ಕರೆಯಲು ತ್ಯಾನಗಟ್ಟಿಗೆ ಬಂದ. ತ್ಯಾನಗಟ್ಟಿಯ ಒಂದು ಪದ್ಧತಿಯೆಂದರೆ ಪರ

ಊರಿನ ಯಾರೂ ಎತ್ತು ಹತ್ತಿಕೊಂಡು ಅಗಸಿಯನ್ನು ಪ್ರವೇಶಿಸುವಂತಿಲ್ಲ. ಆ ಅಧಿಕಾರವಿರುವುದು ಈ ಊರ ಗೌಡನೊಬ್ಬನಿಗೇ. ಈ ನಿಯಮಾನುಸಾರ ಅಲ್ಲಿಯವರು ಇಳಿಯಲು ಹೇಳಿದರೂ ಚೆನ್ನನು ಇಳಿಯಲಿಲ್ಲ. ಗೌಡನಿಗೆ ಸುದ್ದಿಹೋಗಿ ಅವನು ಹಳಬರನ್ನು ಚೆನ್ನನ ಮೈಮೇಲೆ ಬಿಟ್ಟ. ಹಳಬರೊಂದಿಗೆ ಚೆನ್ನನ ಕಾದಾಟವಾಯಿತು. ಈ ಸಂದರ್ಭದ ಪದ್ಯಗಳು ಚೆನ್ನಾಗಿ ಮೂಡಿ ಬಂದಿವೆ.

ಚೆನ್ನ – ಹೆಂಗಸುರಾಂಗ ಚೀರಬ್ಯಾಡ್ರಿ ಸ್ವಲ್ಪ ನಿಲ್ಲರೋ
ಪುಂಡ ಕಟ್ಟೆ-ಚೆನ್ನನ ಒಂದ ಕೂದ್ಲಾ ಕೀಳರೋ.

ಗುದ್ದಿ ನಿಮ್ಮ ಹಲ್ಲು ಮುರಿದೇನಿ ಪೆಟ್ಟ ತಾಳಿರೋ
ಹೆಣತಿ ಕೊಳ್ಳಾನ ತಾಳಿ ಹರದು ಯುದ್ಧ ಮಾಡರೂ

ತಾಯಿ ಹೊಟ್ಟೆ ತಣ್ಣಗಿದ್ದರ ಬದಕಿ ಹೋಗರೋ
ಜೀವದಾಸೆ ಇದ್ದರ ಮನಿಗೆ ಹೇಳಿ ಕಳುವರೋ
ಮತ್ತು ನಿಮ್ಮ ಆಪ್ತರಿದ್ದರ ಕರಸಿಕೊಳ್ಳರೋ

ಹಳಬರು – ಯಾತಕ್ಕ ಇಂಥಾ ಡೌಲಿನ ಮಾತನಾಡುವಿ ॥ಪಲ್ಲವಿ॥
ಗಂಡಸ ಆದರ ಈಗ
ತೋರಿಸೊ ಕೈಯಿಂದ
ಹೌದ ಅಂತೇವಿ ಬಾದ್ದೂರಾ

ಪುಂಡ ಹುಡಗರೆಲ್ಲಾ
ನಿಂದರಗೊಡಾವರಲ್ಲಾ
ಹೊಳ್ಳಿ ಹೋಗಲೋ ಸುಮ್ಮನಾ.

ನಿನ್ನಂಥಾ ಹೇಡಿನಾ
ಕಂಡಿಲ್ಲೊ ನಾವಿನ್ನಾ
ಗುಲ್ಲ ಮಾಡದೆ ಹೋಗೋ ಸುಮ್ಮನಾ

ಚೆನ್ನ ಎತ್ತಿನಿಂದ ಕೆಳಗಿಳಿಯದೆ ಮರಳಿ ಹೋಗುವಾಗ ಹಳಬರಿಗೆ ತ್ಯಾನಗಟ್ಟಿಯ ಬೆಳೆಯನ್ನು ಲೂಟಿ ಮಾಡುತ್ತೇನೆ, ರಕ್ಷಿಸಿಕೊಳ್ಳಿರಿ ಎಂದು ಸವಾಲು ಹಾಕಿದ. ಅಂದರಂತೆ ಮಾಡಿಯೂಬಿಟ್ಟ.

ಚೆನ್ನನ ಈ ಕೆಲಸವನ್ನು ತ್ವಾನಗಟ್ಟಿಯ ಗೌಡ ಸೊಪ್ಪಡ್ಲದ ಗೌಡನಿಗೆ ಪತ್ರದ ಮುಖಾಂತರ ತಿಳಿಸುತ್ತಾನೆ. ಸೊಪ್ಪಡ್ಲದ ಗೌಡ ಗದಿಗೆಪ್ಪನ್ನು ಕರೆಸಿದ. ತಮ್ಮನಿಗೆ ಬುದ್ಧಿವಾದ ಹೇಳುವಂತೆ ಎಚ್ಚರಿಕೆ ಕೊಟ್ಟ. ಆದರೆ ತಮ್ಮ ಅಣ್ಣನ ಮಾತನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ; ಗೌಡನನ್ನು ಅಲ್ಲಗಳೆದು ಸೊಪ್ಪಡ್ಲ ಬಿಟ್ಟು ಸೊಗಲದ ಗುಡ್ಡ ಸೇರಿದ. ಈಗ ಇವನೊಂದಿಗೆ ಗೆಳೆಯರಾದ ಸಿದ್ಧ-ಹುಸೇನಿಯರು ಚೆನ್ನನನ್ನು ಸೇರಿಕೊಂಡು ಹಳ್ಳಿಗಳ ದರೋಡೆ ಮಾಡತೊಡಗಿದರು.

ತನ್ನನ್ನು ಮೀರಿ ನಿಂತ ಚೆನ್ನನ ವಿರುದ್ಧವಾಗಿ ಸೊಪ್ಪಡ್ಲದ ಗೌಡ ಬೆಟಗೇರಿಯ ಪೋಲೀಸ ಅಧಿಕಾರಿಗಳಿಗೆ ದೂರು ಸಲ್ಲಿಸಿದ. ಬೆಟಗೇರಿಯಿಂದ ಚೆನ್ನನನ್ನು ಹಿಡಿಯಲು ಬಂದ ಪೋಲೀಸರು ಚೆನ್ನನೆದುರು ಸೋಲಬೇಕಾಯಿತು. ಅಧಿಕಾರಿಗಳು ಇಷ್ಟಕ್ಕೆ ಬಿಡಲಿಲ್ಲ. ಸೊಪ್ಪಡ್ಲದ ಗೌಡರ ಸಹಾಯ ಕೇಳಿದರು. ಜೂಲಗಟ್ಟಿ ನಿಂಗವ್ವನನ್ನು ಕರೆಯಿಸಿ ಚೆನ್ನನನ್ನು ಹಿಡಿಯುವಲ್ಲಿ ಸಹಾಯ ಮಾಡಬೇಕೆಂದರು. ಹಣದಾಸೆಗೆ ಜೂಲಗಟ್ಟಿ ನಿಂಗವ್ವ ಒಪ್ಪಿಕೊಂಡಳು. ತನ್ನ ಮನೆಗೆ ಬಂದ ಚೆನ್ನನನ್ನು ಪೋಲೀಸರು ಬಂಧಿಸುವಂತೆ ಮಾಡಿದಳು. ಚೆನ್ನನನ್ನು ಬೆಳಗಾವಿಗೆ ಒಯ್ಯುವ ದಾರಿಯಲ್ಲಿ ರಾತ್ರಿಹೊತ್ತು ಕುರುಬಗಟ್ಟಿಯಲ್ಲಿ ಚೆನ್ನನು ಪೋಲೀಸರನ್ನು ಮೋಸಗೊಳಿಸಿ ಓಡಿ ಹೋದನು. ಫೌಜದಾರ ಸಹಿತ ಪೋಲೀಸರು ಎಷ್ಟೇ ಪ್ರಯತ್ನ ಮಾಡಿದರೂ ಚೆನ್ನನು ಸಿಗಲಿಲ್ಲ. ಚೆನ್ನನನ್ನು ಹಿಡಿದುಕೊಟ್ಟವರಿಗೆ ಬಹುಮಾನ ಕೊಡುವುದಾಗಿ ಪೋಲೀಸರು ಹಳ್ಳಿಹಳ್ಳಿಗಳಲ್ಲಿ ಸಾರಿದರು. ಶಿವಾಪುರದ ಗೌಡ ಚೆನ್ನನನ್ನು ತಾನು ಬಂಧಿಸಿಕೊಡುವುದಾಗಿ ಪೋಲೀಸರಿಗೆ ಹೇಳಿದ.

ಈ ಸುದ್ದಿ ತಿಳಿದ ಚೆನ್ನನು ಶಿವಾಪುರದ ಗೌಡನ ಸೊಸೆಯನ್ನು ಕೆರೆಯದಂಡೆಯ ಮೇಲೆ ಅಡ್ಡಗಟ್ಟಿ ಅವಮಾನಗೊಳಿಸಿದನು. ಇದು ಶಿವಾಪುರ ಗೌಡನನ್ನು ರೇಗುವಂತೆ ಮಾಡಿತು. ಗೌಡ ಬಿಟ್ಟೂ ಬಿಡದೆ ಶೋಧಿಸುತ್ತ ಕೊನೆಗೂ ಚೆನ್ನನ ಸುಳಿವನ್ನು ಪತ್ತೆ ಹಚ್ಚಿದ. ಮ್ಯಾದಾರ ಶಿವಪ್ಪನೆಂಬವನ ಮನೆಯಲ್ಲಿ ಚೆನ್ನ ಅಡಗಿಕೊಂಡಿದ್ದಾನೆಂದು ಪೋಲೀಸರಿಗೆ ಗುಟ್ಟಾಗಿ ತಿಳಿಸಿದನು. ಪೋಲೀಸರು ಬಂದು ಮ್ಯಾದಾರ ಶಿವಪ್ಪನ ಮನೆಯನ್ನು ಮುತ್ತಿದರು. ಚೆನ್ನನು ಪಾರಾಗಿ ಸಿದ್ಧನು ತಾನೇ ಚೆನ್ನನೆಂದು ಪೋಲೀಸರ ಕೈವಶನಾದನು. ಸಿದ್ಧನನ್ನು ಎಳೆದೊಯ್ದು ಗಲ್ಲು ಶಿಕ್ಷೆ ಕೊಡಿಸಿದರು. ಬದುಕಿನಲ್ಲಿ ನಿರಾಶೆ ಹೊಂದಿದ ಚೆನ್ನನು ಸನ್ಯಾಸಿಯಾಗಿ ಅಡವಿ ಸೇರಿದನು.

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು